ಜನಪದ ಸೇವಕ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೬ ಜೂನ್-೨೦೦೬ ಸಂಚಿಕೆ-೧೧



ತಡದಿ ಇದೆಂಥ ಅಭಿವೃದ್ಧಿ?

ಹಳ್ಳಿಗಳು ಮಾರಾಟಕ್ಕಿವೆ, ಗ್ರಾಮಗಳ ನಿರಾಶೆ ಹೆಚ್ಚುತ್ತಿದೆ

ಜನಪದ ವಿಚಾರದಲ್ಲಿ

ಜೂನ್–೨೦೦೬

೧) ತದಡಿ ಇದೆಂಥ ಅಭಿವೃದ್ಧಿ ?

–ಸುರೇಂದ್ರ ಕೌಲಗಿ *ಪುಟ–೦೩*

ದೇಶವನ್ನು ಕಾಡುತ್ತಿರುವ ಈಗಿನ ಭಯಂಕರ ಸಮಸ್ಯೆಯೆಂದರೆ ಅಭಿವೃದ್ಧಿಯ ತಪ್ಪು ಕಲ್ಪನೆ. ಯಾರಿಗಾಗಿ? ಅಭಿವೃದ್ಧಿ ಎಂದು ಯೋಚಿಸಲಾಗುತ್ತಿದೆಯೊ ಅವರ ಶವದ ಮೇಲೆಯೆ ಗೋರಿ ಕಟ್ಟುವ ಯೋಜನೆಗಳ ಸಂಕೇತವಾಗಿ ಈಗ ತದಡಿ ಯೋಜನೆ ಬಂದಿದೆ. ಈ ವಿಷಯ ಕುರಿತು ಚಿಂತೆ ಈ ಲೇಖನದಲ್ಲಿ ವ್ಯಕ್ತವಾಗಿದೆ.

೨) ಹಳ್ಳಿಗಳು ಮಾರಾಟಕ್ಕಿವೆ, ಗ್ರಾಮಗಳ ನಿರಾಶೆ ಹೆಚ್ಚುತ್ತಿದೆ.

–ದೇವಿಂದರ್ ಶರ್ಮ *ಪುಟ–೦೭*

ನಗರಗಳ ಬೆಳವಣಿಗೆ ಹಳ್ಳಿಗಳ ನಾಶಕ್ಕೆ ಕಾರಣವಾಗುತ್ತಿದೆಯೆಂಬ ನಗ್ನ ಸತ್ಯವನ್ನು ಈ ಲೇಖನ ತಿಳಿಸುತ್ತದೆ.

೩) ಕನ್ನಡದ ಸ್ಥಿತಿಗತಿ

–ಜಿ.ಟಿ. ನಾರಾಯಣರಾವ್ *ಪುಟ–೧೦*

ಕನ್ನಡಕ್ಕೆ ಪ್ರಾಧಾನ್ಯತೆ ಕೊಟ್ಟಲ್ಲಿ ಕರ್ನಾಟಕ ತೀರ ಹಿಂದೆ ಬೀಳುವುದು ಶತಃಸಿದ್ಧ. ಎಂಬ ಶುಷ್ಕ ತರ್ಕವನ್ನು ಅಸಂಖ್ಯ ವೇದಿಕೆಗಳಲ್ಲಿ ಕನ್ನಡಿಗರಿಂದಲೆ ಕೇಳಿ ಕೇಳಿ ಕನ್ನಡದ ಸಾಮರ್ಥ್ಯವನ್ನು ತಿಳಿದ ನನ್ನಂಥವರಿಗೆ ತಲೆ ಚಿಟ್ಟು ಹಿಡಿದು ಹೋಗಿದೆ ಎಂದು ಘೋಷಿಸುತ್ತಾರೆ. ಈ ಲೇಖನದ ವಿಜ್ಞಾನಿ ಲೇಖಕರು.

೪) ರವೀಂದ್ರನಾಥ್ ಠಾಕೂರ್

–ಕೆ.ರಾಘವೇಂದ್ರರಾವ್. *ಪುಟ–೧೨*

ರವೀಂದ್ರನಾಥ್ ಠಾಕೂರ್‌ರಂಥ ಮಹಾನೀಯರ ವಿಚಾರಗಳನ್ನು ಕೇವಲ ಅವರ ಜಯಂತಿಯ ದಿನದಂದಷ್ಟೆ ಅಲ್ಲ ದಿನವೂ ಮನನೀಯವಾಗಿದೆಯೆಂಬ ಭಾವನೆಯನ್ನು ಈ ಲೇಖನ ಎತ್ತಿ ಹಿಡಿಯುತ್ತದೆ.

೫) ನಿಂತ ನೀರಾಗಿರುವ ಸಮಾಜಕ್ಕೊಂದು ಪರಿಹಾರ

–ಎಚ್.ಎಸ್.ದೊರೆಸ್ವಾಮಿ *ಪುಟ–೧೪*

ಎಲ್ಲರೂ ಸುಖವಾಗಿರಲೆಂಬ ನಮ್ಮ ಬಯಕೆ ಸಾಕಾರಗೊಳ್ಳುವ ಬಗೆ ಹೇಗೆ? ಎಂಬ ಕೆಲ ಮಾರ್ಗದರ್ಶಿಸೂತ್ರಗಳು ಈ ಲೇಖನದಲ್ಲಿವೆ.

೬) ಪರಿಸರ ಪ್ರಜ್ಞೆ

–ಡಾ॥ ಹೆಚ್. ರಾಮಚಂದ್ರಶರ್ಮ. *ಪುಟ–೧೭*

ಪರಿಸರ ಪ್ರಜ್ಞೆ ಆಧುನಿಕ ಭಾರತೀಯರಿಗಿಂತ ಪ್ರಾಚೀನ ಭಾರತೀಯರಲ್ಲಿ ಹೆಚ್ಚು ಪ್ರಜ್ಞಾಪೂರ್ಣವಾಗಿತ್ತೆಂಬುದನ್ನು ಲೇಖಕರು ಈ ಲೇಖನದಲ್ಲಿ ಸಿದ್ಧಪಡಿಸಿದ್ದಾರೆ.

೭) ಭಾರತೀಯ ಸರ್ಕಸ್‌ನ ಮೂಲಪುರುಷ ಕನ್ನಡಿಗ

–ದ.ರಾ. ಪುರೋಹಿತ *ಪುಟ–೨೦*

ಆಧುನಿಕ ಭಾರತದಲ್ಲಿ ಕೇರಳ ರಾಜ್ಯ ಮುಂದಿರುವಂತೆ ಸರ್ಕಸ್ ಕ್ಷೇತ್ರದಲ್ಲಿಯೂ ಆ ರಾಜ್ಯವೆ ಮುಂದೆಂಬ ಕಲ್ಪನೆಯಿದೆ. ಆದರೆ ಸರ್ಕಸ್ ಕ್ಷೇತ್ರದಲ್ಲಿ ಕನ್ನಡಿಗರೆ ಮೂಲಪುರುಷರು ಮತ್ತು ಸರ್ಕಸ್ ಮೂಲಕ ತಮ್ಮ ದೇಶಾಭಿಮಾನವನ್ನು ಮೆರೆದವರಾಗಿದ್ದರೆಂಬ ಸಂಗತಿಯ ಮೇಲೆ ಈ ಲೇಖನ ಬೆಳಕು ಚೆಲ್ಲುತ್ತದೆ.

೮) ಹಳ್ಳಿ ಹುಡುಗನ ಇಂಗ್ಲಿಷ್ ಕಲಿಕೆ

–ಸುರೇಂದ್ರಕೌಲಗಿ *ಪುಟ–೨೩*

ಇಂಗ್ಲಿಷ್ ಪರಿಸರದಿಂದ ದೂರವಿರುವ ಹಳ್ಳಿಯ ಮಕ್ಕಳ ಇಂಗ್ಲಿಷ್ ಕಲಿಕೆಯ ಹೋರಾಟದ ಒಂದು ಚಿತ್ರಣ ಈ ಲೇಖನದಲ್ಲಿದೆ.

೯) ಜನಪದ ನಿಲಯದ ಅಂತರಂಗದಲ್ಲಿ..............೩೧ *ಪುಟ–೨೫*

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಜೂನ್-೨೦೦೬

ಸಂಪುಟ-೬

ಸಂಚಿಕೆ-೧೧

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ

ಜನಪದ ಸೇವಾ ಟ್ರಸ್ಟ್

ಧರ್ಮದರ್ಶಿ ಮಂಡಳಿ

ಚಂದಾ ವಿವರ

ವಾರ್ಷಿಕ : ರೂ ೧೦೦/-

ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ

ಜನಪದ ಸೇವಾ ಟ್ರಸ್ಟ್(ರಿ)

ಮೇಲುಕೋಟೆ-೫೭೧ ೪೩೧

ಮಂಡ್ಯ ಜಿಲ್ಲೆ

(08236)298754

e-mail-janapada@yahoo.com

www.janapada.org

ತೆರೆದ ಬುಕ್ಕು

ತೆರೆದಿದೆ ಬುಕ್ಕು ತೆರೆದಿದೆ
ಜಗದ ಬುಕ್ಕಿದು ತೆರೆದಿದೆ
ಸೊಗದ ಬುಕ್ಕಿದು ತೆರೆದಿದೆ
ಓದಬಲ್ಲವರಿಗೆ ತೆರೆದಿದೆ
ಓದಲೆಲ್ಲರಿಗೂ ತೆರೆದಿದೆ.
ಆದಿಕಾಲದಿಂದಾದಿ ಮೂಲದಿಂದಾದಿ
ಅಂತ್ಯವಿದು ತೆರೆದಿದೆ
ಆದಿಶೋಧವಿದು ತೆರೆದಿದೆ
ಅನಾದಿಬೋಧವಿದು ತೆರೆದಿದೆ.
ಸಂಧಿ ಸಂಧಿಗಳ ಸಂದಿದೆ
ಪರ್ವಪರ್ವಗಳ ಪೊಂದಿದೆ
ಖಂಡ ಖಂಡಗಳ ಕಾಂಡ ಕಾಂಡಗಳ
ಖಂಡಕಾವ್ಯವಿದು ತೆರೆದಿದೆ
ಬ್ರಹ್ಮಾಂಡದಗಲಕ್ಕೂ ತೆರೆದಿದೆ
ದಿವ್ಯ ದಿವ್ಯ ಚಿರನವ್ಯ ನವ್ಯವಿಹ
ಭವ್ಯ ಕಾವ್ಯವಿದು ತೆರೆದಿದೆ
ಅವ್ಯಯಾಂಕವಿದು ತೆರೆದಿದೆ.

–ಬೆಳಗೆರೆ ಕೃಷ್ಣಶಾಸ್ತ್ರಿ

ವಿಚಾರ ದೀಪ್ತಿ

ಆಲ್ಬರ್ಟ್ ಐನಸ್ಟೈನ್ ೧೯೫೫ ಏಪ್ರಿಲ್ ೧೮ ರಂದು ಪ್ರಿನ್ಸ್‌ಟನ್ ಆಸ್ಪತ್ರೆಯಲ್ಲಿ ಮರಣಹೊಂದಿದರು. ಐನ್‌ಸ್ಟೈನ್ ಸ್ವತಃ ತಮ್ಮ ಮೆದುಳನ್ನು ಸಂಶೋಧನೆಗಾಗಿ ಕೊಡಲು ಒಪ್ಪಿಗೆ ಕೊಟ್ಟಿದ್ದರೂ ಸಹ ಮೆದುಳನ್ನು ತೆಗೆದುಹಾಕುವ ಬಗ್ಗೆ ಮತ್ತು ಅದರ ಒಡೆತನದ ಬಗ್ಗೆ ಅವರ ಕುಟುಂಬದ ಸದಸ್ಯರು, ವೈದ್ಯರು ಮತ್ತು ವಿಜ್ಞಾನಿಗಳಲ್ಲಿ ದೊಡ್ಡ ವಿವಾದವೆ ಉಂಟಾಯಿತು. ಡಾ॥ ಥಾಮಸ್‌ಹಾರ್ವಿ ಓರ್ವ ಪೆಥಾಲಜಿಸ್ಟ್, ಐನ್‌ಸ್ಟೈನ್‌ರ ಮರಣಕಾಲದಲ್ಲಿ ಆಸ್ಪತ್ರೆಯಲ್ಲಿ ಕರ್ತವ್ಯದ ಮೇಲೆ ಇದ್ದರು. ಅವರೆ ಐನ್‌ಸ್ಟೈನ್‌ರ ಮೆದುಳನ್ನು ತೆಗೆದರು. ಮೆದುಳಿನ ಒಡೆತನದ ವಿಷಯದಲ್ಲಿ ಗೊಂದಲ ಮತ್ತು ವಿವಾದವಿದ್ದುದರಿಂದ ಡಾ॥ಹಾರ್ವಿ ಆ ಮೆದುಳಿನ ಬಹುಭಾಗದೊಂದಿಗೆ ೪೦ ವರ್ಷಗಳ ಕಾಲಕ್ಕೂ ಹೆಚ್ಚು ತಲೆಮರೆಸಿಕೊಂಡರು. ಆದರೆ ಆ ಮೆದುಳಿನ ಮೂರುಭಾಗಗಳನ್ನು ಬೇರೆ ವಿಜ್ಞಾನಿಗಳಿಗೆ ಕೊಟ್ಟಿದ್ದರು. ಇತ್ತೀಚಿಗಿನವರೆಗೂ ಯಾವುದೇ ಒಬ್ಬ ಸಂಶೋಧಕನೂ ಸಂಶೋಧನೆಯ ಫಲಿತಾಂಶಗಳನ್ನು ಪ್ರಕಟಿಸಿರಲಿಲ್ಲ. ಕ್ಯಾಲಿಪೋರ್ನಿಯಾ ವಿಶ್ವವಿದ್ಯಾನಿಲಯದ ಮಾರಿಯನ್ ಡೈಮಂಡ್ ತಮ್ಮ ಸಂಶೋಧನೆಯ ವಿಷಯವನ್ನು ಪ್ರಕಟಿಸಿದರು. ಐನ್‌ಸ್ಟೈನ್‌ನ ಮೆದುಳಿನಲ್ಲಿ ಗ್ಲಾಯಲ್‌ಸೆಲ್ಸ್ ಎಂಬುದರ ಪ್ರಮಾಣ ಸಾಮಾನ್ಯ ಸಂಖ್ಯೆಗಿಂತ ಹೆಚ್ಚಾಗಿದೆಯೆಂದು ಪ್ರೊ॥ ಮಾರಿಯನ್ ಹೇಳಿದರು. ಈ ಗ್ಲಾಯಲ್‌ಸೆಲ್‌ಗಳು ಮೆದುಳಿನ ಎಡಭಾಗದಲ್ಲಿದ್ದು ಗಣಿತ ಮತ್ತು ಭಾಷಾ ಸಾಮರ್ಥ್ಯವನ್ನು ನಿಯಂತ್ರಿಸುತ್ತದೆಂದು ತಿಳಿಯಲಾಗಿದೆ. ೧೯೯೯ ಜೂನ್‌ನಲ್ಲಿ ಕೆನಾಡದ ಸಾಂದ್ರವೈಟಲ್‌ಸನ್ ಎಂಬ ವಿಜ್ಞಾನಿ ಐನ್‌ಸ್ಟೈನ್‌ರ ಮೆದುಳಿಗೆ ಸಂಬಂಧಿಸಿದ ಸಂಶೋಧನೆಯ ಕೆಲವು ಫಲಿತಾಂಶವನ್ನು ಪ್ರಕಟಿಸಿದರು.

ಸಾಮಾನ್ಯ ಬುದ್ಧಿಯ ೩೫ ಪುರುಷರ ಹಾಗೂ ೫೬ ಮಹಿಳೆಯರ ಮೆದುಳಿನೊಂದಿಗೆ ಐನ್‌ಸ್ಟೈನ್‌ರ ಮೆದುಳನ್ನು ಹೋಲಿಕೆ ಮಾಡಿದರು. ಆಗ ಐನ್‌ಸ್ಟೈನ್‌ರ ಗಣಿತ ತರ್ಕದ ವಿಚಾರಕ್ಕೆ ಸಂಬಂಧಿಸಿದ ಮೆದುಳಿನ ಎರಡು ಭಾಗಗಳು ಸಾಮಾನ್ಯರಕ್ಕಿಂತ ಶೇ೧೫ ರಷ್ಟು ಅಗಲವಾಗಿತ್ತೆಂದು ಅವರು ಪತ್ತೆ ಹಚ್ಚಿದರು.

ಐನ್‌ಸ್ಟೈನ್‌ರ ಮೆದುಳಿನ ಕೆಲವು ತುಂಡುಗಳನ್ನು ಈಗ ಮೇಣದಲ್ಲಿ ಭದ್ರವಾಗಿಡಲಾಗಿದೆ. ಇನ್ನು ಕೆಲವು ತುಂಡುಗಳನ್ನು ವಿಭಜಿಸಿ ಮೈಕ್ರೊಸ್ಕೋಪಿನ ಸ್ಲೈಡ್ಸ್‌ಗಳ ಮೇಲೆ ಇಡಲಾಗಿದೆ. ಮತ್ತು ಇನ್ನೂ ಕೆಲವು ತುಣುಕುಗಳನ್ನು ಫಾರ್ಮಾಲ್ಡಿಹೈಡ್‌ನ ಭರಣಿಗಳಲ್ಲಿ ತೇಲಿಬಿಟ್ಟಿದ್ದಾರೆ. ಐನ್‌ಸ್ಟೈನ್‌ರ ಮೆದುಳನ್ನು ಅನೇಕ ವಿಜ್ಞಾನಿಗಳು ಅಧ್ಯಯನ ಮಾಡುತ್ತಿದ್ದರೂ ಸಹ ಇದುವರೆಗೆ ಐನ್‌ಸ್ಟೈನ್‌ರ ಮೆದುಳಿನಲ್ಲಿಯ ಬೂದು ಬಣ್ಣದ ಪದಾರ್ಥವು ಬೇರೆಯವರಿಗಿಂತ ಭಿನ್ನವಾಗಿದೆಯೆಂಬ ಸಂಶೋಧನೆಗೆ ಪ್ರಮಾಣಬದ್ಧವಾದ ಸಾಕ್ಷ್ಯಾಧಾರವಿಲ್ಲ. ಜನರು ಐನ್‌ಸ್ಟೈನ್‌ರ ಮೆದುಳನ್ನು ವಸ್ತು ಸಂಗ್ರಾಹಾಲಯದಲ್ಲಿಟ್ಟು ಪ್ರದರ್ಶಿಸುತ್ತಿದ್ದಾರೆ. ಮತ್ತು ಅದನ್ನು ಒಂದು ಜನಪ್ರಿಯ ಕಾಲ್ಪನಿಕ ಕಾದಂಬರಿಯ ವಿಷಯವನ್ನಾಗಿಯೂ ಮಾಡಿದ್ದಾರೆ.

ಇಷ್ಟೆಲ್ಲಾ ಸಂಶೋಧನೆಗಳು ಮತ್ತು ಅಧ್ಯಯನಗಳ ತರುವಾಯವೂ ಅನೇಕ ವಿಜ್ಞಾನಿಗಳು ಇದೆಲ್ಲವು ಸಮಯದ ವ್ಯಯವೆಂದು ಭಾವಿಸುತ್ತಾರೆ. ಐನ್‌ಸ್ಟೈನ್‌ರ ಮೆದುಳನ್ನು ಬಹು ಉತ್ತಮ ರೀತಿಯಲ್ಲಿ ಕಾಪಾಡಿಕೊಂಡು ಬಂದಿದೆಯಾಗಿದ್ದರೂ ಸಹ ಸತ್ತುಹೋದ ಶರೀರಭಾಗದ ಅಧ್ಯಯನದಿಂದ ಐನ್‌ಸ್ಟೈನ್‌ರ ವೈಚಾರಿಕ ಪ್ರಕ್ರಿಯೆಯ ಒಳನೋಟ ಸಿಗಲು ಸಾಧ್ಯವಾಗಿಲ್ಲ. ಆದಾಗ್ಯೂ ಐನ್‌ಸ್ಟೈನ್‌ರ ಮೆದುಳನ್ನು ಇನ್ನೂ ಕಾಪಾಡಿಕೊಂಡು ಬರಲಾಗಿರುವ ಬಗ್ಗೆ ಬಹು ವಿಜ್ಞಾನಿಗಳು ಉತ್ತೇಜಿತರಾಗುತ್ತಾರೆ.

(ಮಾಸ್ಟ್ ಪತ್ರಿಕೆಯ ಸಾಭಾರ) ಅನು–ಸು.ಕೌ.

ತದಡಿ ಇದೆಂಥ ಅಭಿವೃದ್ಧಿ ?

–ಸುರೇಂದ್ರ ಕೌಲಗಿ

ಹಿಂದುಸ್ಥಾನ ಈ ಆಧುನಿಕ ನಾಗರಿಕತೆಯನ್ನು ವರ್ಜಿಸಿದರೆ ಅದರಿಂದ ಲಾಭವೇ ಆದಿತೆಂದು ನನಗೆ ಅನಿಸುತ್ತದೆ. –ಗಾಂಧೀ

ಪರಿಸರದ ಮೇಲೆ ಮನುಷ್ಯ ಸಮರ ಸಾರಿದ್ದಾನೆ. ಈ ಸಮರದಲ್ಲಿ ಹೆಚ್ಚಾಗಿ ಮನುಷ್ಯನದೆ ಕೈ ಮೇಲಾಗುತ್ತದೆ. ಅಪರೂಪಕ್ಕೊಮ್ಮೆ ಪರಿಸರದ ಕೈ ಮೇಲಾಗುತ್ತದೆ. ಮನುಷ್ಯ ಪರಿಸರದ ವಿರುದ್ಧ ಸಾರಿರುವ ಸಮರದಲ್ಲಿ ತಂತ್ರಜ್ಞಾನವನ್ನು ಒಂದು ಅಸ್ತ್ರವನ್ನಾಗಿ ಬಳಸಿಕೊಳ್ಳುತ್ತಿದ್ದಾನೆ. ಪರಿಸರವು ತಂತ್ರಜ್ಞಾನವನ್ನು ಬಳಸಿಕೊಳ್ಳುವಂಥ ಶಕ್ತಿ ಪಡೆಯದಿದ್ದರೂ ಸಹ ಅದು ತನ್ನ ಒಡಲಾಳದಲ್ಲಿರುವ ಕೋಪವನ್ನು ಹೊರಗೆಡುಹಿ ಮಾನವ ಕುಲವೆ ತತ್ತರಿಸುವಂತೆ ಮಾಡುತ್ತದೆ. ಅಂಥ ಕ್ಷಣಗಳಲ್ಲಿ ಮನುಷ್ಯ ಪರಿಸರದ ಕೋಪ ಮತ್ತು ದಾಳಿಯ ಮುಂದೆ ನಿಸ್ಸಾಹಾಯಕನಾಗಿ ಕೂರುತ್ತಾನೆ. ಮನುಷ್ಯ ಮತ್ತು ಪರಿಸರದ ನಡುವೆ ಸಮರ ನಡೆದು ಶತಮಾನಗಳೆ ಕಳೆದವು. ಎಲ್ಲ ಸಮರಗಳಲ್ಲಿಯಂತೆ ಹೋರಾಟದ ಪ್ರಾರಂಭಿಕ ರೀತಿ–ನೀತಿಗಳು ನಿಧಾನವಾಗಿದ್ದು ಕ್ರಮೇಣ ಅವು ತೀವ್ರಗತಿಯನ್ನು ಪಡೆಯುವಂತೆ, ಈಗ ಮನುಷ್ಯ ಪರಿಸರದ ವಿರುದ್ಧ ಸಾರಿರುವ ಸಮರದಲ್ಲೂ ಕೂಡ ಮೊದಲಿದ್ದ ಯುದ್ಧದ ನಿಧಾನ ಗತಿ ಇತ್ತೀಚಿನ ವರ್ಷಗಳಲ್ಲಿ ತೀವ್ರಗೊಂಡಿದೆ. ಈ ತೀವ್ರತೆಗೆ ಮನುಷ್ಯನ ಅಭಿವೃದ್ಧಿಯೆಂಬ ಮಹತ್ವಾಕಾಂಕ್ಷೆ ಬೆಂಕಿಗೆ ತುಪ್ಪವನ್ನು ಸುರಿದಂತೆ ಕಾರಣವಾಗುತ್ತಿದೆ. ಮನುಷ್ಯನ ಅಭಿವೃದ್ಧಿಯ ಈ ಯಜ್ಞಕುಂಡದಲ್ಲಿ ಪರಿಸರದ ತುಪ್ಪವನ್ನು ಹಾಕಲಾಗುತ್ತಿದೆ. ಅಂಥ ಒಂದು ಕಾರ್ಯ ಇಷ್ಟರಲ್ಲಿಯೆ ನಮ್ಮ ಕರ್ನಾಟಕದ ಉತ್ತರಕನ್ನಡ ಜಿಲ್ಲೆಯ ತದಡಿ ಎಂಬಲ್ಲಿ ನಡೆಯಲಿದೆಯೆಂಬುದು ಪರಿಸರ ಪ್ರೇಮಿಗಳಿಗೆಲ್ಲ ಆಘಾತವನ್ನು, ಚಿಂತೆಯನ್ನುಂಟುಮಾಡಿದೆ. ಎರಡನೆ ಮಹಾಯುದ್ಧದ ಸಮಯದಲ್ಲಿ ಅಣುಬಾಂಬ್ ಹಿರೋಷಿಮಾ ಮತ್ತು ನಾಗಸಾಕಿಯ ಮೇಲೆ ಬಿದ್ದಂಥ ಪ್ರಮಾಣದಷ್ಟೆ ಆಘಾತಕಾರಿ ಸಂಗತಿ ತದಡಿ ಉಷ್ಣಸ್ಥಾವರ ಯೋಜನೆಯಿಂದ ಆಗಲಿದೆ. ಇಲ್ಲಿ ಹೀರೋಷಿಮಾ ಮತ್ತು ನಾಗಸಾಕಿಗಳಂಥ ನೇರವಾದ ಮತ್ತು ತಕ್ಷಣದ ಮಾನವಹಾನಿ ಮತ್ತು ಆಸ್ತಿ ಹಾನಿಯಾಗದಿದ್ದರೂ ಕೂಡ ಆ ಯೋಜನೆಯಿಂದ ಹಲವಾರು ವರ್ಷಗಳಲ್ಲಿ ಉಂಟಾಗುವ ಅನೇಕ ಬಗೆಯ ಹಾನಿಯ ಲೆಕ್ಕವನ್ನು ಗಣನೆಗೆ ತೆಗೆದುಕೊಂಡರೆ ಅಣುಬಾಂಬಿನ ಪರಿಣಾಮದ ಭೀಕರತೆಗೆ ಯಾವ ಅರ್ಥದಲ್ಲೂ ಕಡಿಮೆಯಾಗುವುದಿಲ್ಲ.

ಕಾರವಾರ ಬಂದರು ಸಮೀಪ ತದಡಿ ಎಂಬ ಗ್ರಾಮದ ಬಳಿ ಕಲ್ಲಿದ್ದಲು

ಆಧಾರಿತ ವಿದ್ಯುತ್ ಸ್ಥಾವರ ಸ್ಥಾಪಿಸಲು ಸರ್ಕಾರ ನಿರ್ಧರಿಸಿದೆ. ಇನ್ನು ಏಳು ತಿಂಗಳೊಳಗಾಗಿ ಯೋಜನೆಗೆ ಸಂಬಂಧಿಸಿದ ಪೂರ್ವಸಿದ್ಧತೆಗಳನ್ನು ಪೂರೈಸಲಾಗುವುದು ಮತ್ತು ಸುಮಾರು ಮೂರುವರೆ ಸಾವಿರ ಕೋಟಿ ರೂಪಾಯಿಗಳನ್ನು ಖರ್ಚುಮಾಡಲಾಗುವುದು. ಈಗ ದೇಶದಲ್ಲಿ ಶೇ೧೨ ರಷ್ಟು ವಿದ್ಯುತ್ ಕೊರತೆ ಇರುವುದರಿಂದ ೨೦೧೮ ರೊಳಗೆ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ೧ ಲಕ್ಷ ಮೆಗಾವ್ಯಾಟ್‌ಗೆ ಹೆಚ್ಚಿಸಬೇಕೆಂದು ಉದ್ದೇಶಿಸಲಾಗಿದೆ. ತದಡಿ ಸ್ಥಾವರದಿಂದ ೪೦೦೦ ಮೆಗಾವ್ಯಾಟ್ ವಿದ್ಯುತ್ತನ್ನು ಉತ್ಪಾದಿಸುವ ಗುರಿಯನ್ನಿಟ್ಟುಕೊಳ್ಳಲಾಗಿದೆ. ತದಡಿ ಸಮೀಪದ ಬೆಲೆಕಾನರ್ ಬಳಿ ಸುಸಜ್ಜಿತ ಬಂದರೊಂದನ್ನು ನಿರ್ಮಾಣಮಾಡಿ ವಿದ್ಯುತ್ ಸ್ಥಾವರಕ್ಕೆ ಬೇಕಾದ ಕಲ್ಲಿದ್ದಲನ್ನು ಹಡಗುಗಳ ಮತ್ತು ರೈಲುಗಳ ಮೂಲಕ ತರಿಸಿಕೊಳ್ಳಲು ವ್ಯವಸ್ಥೆ ಮಾಡಲಾಗುವುದು. ಗೋಕರ್ಣದ ಬಳಿ ೧೮೪೮ ಎಕರೆ ಸಮುದ್ರದ ಉಪ್ಪುನೀರಿನಿಂದ ಆವೃತವಾದ ಖಾಲಿ ಜಾಗದಲ್ಲಿ ಸ್ಥಾವರದ ನಿರ್ಮಾಣವಾಗಲಿದೆಯಾದರೂ ಇದು ಮೂಲತಃ ಕೃಷಿ ಭೂಮಿಯೆ ಆಗಿತ್ತು. ೨೫ ವರ್ಷಗಳ ಹಿಂದೆ ಉಪ್ಪು ತಯಾರಿಸುವುದಕ್ಕಾಗಿ ಕ್ಲಾಸಿಕ್ ಸೋಡಾ ಕಂಪನಿಗೆ ಕರ್ನಾಟಕ ಸರ್ಕಾರವು ಈ ಭೂಮಿಯನ್ನು ರೈತರಿಂದ ಪಡೆದು ಕಂಪನಿಗೆ ತೆಗೆದುಕೊಟ್ಟಿತ್ತು.

ಯಾವುದೇ ಒಂದು ಯೋಜನೆಯನ್ನು ಕೇಂದ್ರಸರ್ಕಾರವಾಗಲಿ ರಾಜ್ಯಸರ್ಕಾರವಾಗಲಿ ಕೈಗೊಂಡಾಗ ಪರಿಸರವಾದಿಗಳು ಅದನ್ನು ವಿರೋಧಿಸುವುದರಿಂದ ಸರ್ಕಾರವು ಪರಿಸರವಾದಿಗಳನ್ನು ಕಂಡರೆ ಶತೃತ್ವದ ಭಾವನೆಯಿಂದ ನೋಡುತ್ತದೆ. ಇದೊಂದು ದುರ್ದೈವದ ಸಂಗತಿ. ಆದರೆ ನಾಡಿನ ಜನರ ಮತ್ತು ಪರಿಸರದ ಹಿತವನ್ನು ಕಾಯುವ ಹೊಣೆಯನ್ನು ಹೊತ್ತಿರುವ ಸರ್ಕಾರವು ಪರಿಸರವಾದಿಗಳ ಮಾತಿಗೆ ಏಕೆ ಮನ್ನಣೆ ಕೊಡುವುದಿಲ್ಲ; ಎಂಬುದು ಒಂದು ಯಕ್ಷಪ್ರಶ್ನೆಯಾಗಿದೆ. ಯಾವುದೊ ಒಂದು ಹಂತದಲ್ಲಿ ಅಭಿವೃದ್ಧಿ ಪರವಾಗಿರುವ ಸರ್ಕಾರಕ್ಕೂ ಮತ್ತು ಪರಿಸರ ಪರವಾಗಿರುವ ಪರಿಸರವಾದಿಗಳ ಮಧ್ಯೆ ತಾಕಲಾಟ ನಡೆಯುತ್ತಿರುವ ಅನುಭವವಾಗುತ್ತದೆ. ಇದಕ್ಕೆ ಮುಖ್ಯ ಕಾರಣ ಅಭಿವೃದ್ಧಿಯನ್ನು ಕುರಿತಾದ ವ್ಯಾಖ್ಯೆಗೆ ಸಂಬಂಧಿಸಿದ್ದು. ಸರ್ಕಾರ ರೂಪಿಸಿಕೊಂಡಿರುವ ಅಭಿವೃದ್ಧಿಯವ್ಯಾಖ್ಯೆಗೂ, ಪರಿಸರವಾದಿಗಳು ರೂಪಿಸಿಕೊಂಡಿರುವ ಅಭಿವೃದ್ಧಿಯ ವ್ಯಾಖ್ಯೆಗೂ ಭೂಮಿ, ಆಕಾಶದಷ್ಟು ವ್ಯತ್ಯಾಸವುಂಟಾಗಿದೆ. ಜನತೆಯ ಆಶೋತ್ತರಗಳಿಗೆ ಸ್ಪಂದಿಸುವ ಸರ್ಕಾರ ಜನರ ಬೇಡಿಕೆಗಳಿಗೆ ಆದ್ಯತೆಯನ್ನು ಕೊಡಬೇಕಾಗುತ್ತದೆ. ಸರ್ಕಾರದ ಮಟ್ಟಿಗೆ ಜನರ ಆಶೋತ್ತರಗಳ ಮನ್ನಣೆಯೆಂದರೆ ಜನರು ಚುನಾವಣೆಯಲ್ಲಿ ನೀಡುವ ಮತವೆ ಆಗಿದೆ. ಆದ್ದರಿಂದ ಸಕಾರವು ಪರಿಸರದ ವ್ಯಾಖ್ಯೆಯನ್ನು ರೂಪಿಸುವಾಗ ಮತ್ತು ಆ ವ್ಯಾಖ್ಯೆಗನುಗುಣವಾಗಿ ಯೋಜನೆಗಳನ್ನು ಹಾಕಿಕೊಳ್ಳುವಾಗ ಸಹಜವಾಗಿಯೆ

ಮತಪೆಟ್ಟಿಗೆಗಳ ಮೇಲೆ ಸರ್ಕಾರದ ಕಣ್ಣು ಇರುತ್ತದೆ. ಇಂಥ ಸಂದಿಗ್ಧತೆ ಪರಿಸರವಾದಿಗಳಿಗಿಲ್ಲ. ಅವರು ಯಾವ ಚುನಾವಣೆಯನ್ನೂ ಎದುರಿಸಬೇಕಾಗಿಲ್ಲ. ಅದಕ್ಕಾಗಿ ಯಾವ ಮತದಾರರನ್ನೂ ಓಲೈಸಬೇಕಾಗಿಲ್ಲ ಮತ್ತು ಯಾರ ಹಿತಾಸಕ್ತಿಗಳ ದಾಸನೂ ಆಗಬೇಕಾಗಿಲ್ಲ. ಆದ್ದರಿಂದ ಪರಿಸರವಾದಿಗಳ ಅಭಿವೃದ್ಧಿಯ ವ್ಯಾಖ್ಯೆ ಒಂದು ತೆರದಲ್ಲಿ ಜೀವನ್ಮುಖಿಯಾಗಿರುತ್ತದೆ. ಪರಿಸರವಾದಿಗಳ ದೃಷ್ಟಿಯಲ್ಲಿ ಅಭಿವೃದ್ಧಿಯೆಂಬುದು ಸಮಸ್ತ ಜೀವಕೋಟಿಯ ಜೀವನದ ಪ್ರಾವಿತ್ರ್ಯತೆಯನ್ನು ಎತ್ತಿ ಹಿಡಿಯುವ ಧರ್ಮವಾಗಿರುತ್ತದೆ. ಅವರ ಈ ಧಾರ್ಮಿಕತೆಯಲ್ಲಿ ಆರ್ಥಿಕ ಹಾಗೂ ಭೌತಿಕ ಲಾಭಕ್ಕಿಂತ ಹೆಚ್ಚಾಗಿ ಪರಿಸರದ ಶ್ರೀಮಂತಿಕೆಯನ್ನು ಹೆಚ್ಚಿಸುವ ಪ್ರಯತ್ನಕ್ಕೆ ಪ್ರಾಮುಖ್ಯತೆಯಿರುತ್ತದೆ. ಪರಿಸರದ ಬಗ್ಗೆ ಇಂಥ ಸೂಕ್ಷ್ಮ ಭಾವನೆ ಸರ್ಕಾರಕ್ಕಿರುವುದಿಲ್ಲ. ಸರ್ಕಾರಕ್ಕೆ ಹೃದಯವಂತಿಕೆಯಿರುವುದಿಲ್ಲ. ಒಂದು ವೇಳೆ ಸರ್ಕಾರಕ್ಕೆ ಪರಿಸರದ ಬಗ್ಗೆ ಕಾಳಜಿ ಇರುವುದೇ ಆದಲ್ಲಿ ತದಡಿಯಂಥ ಯೋಜನೆಯನ್ನು ಕೈಗೊಳ್ಳುವಾಗ ಮತ್ತು ಒಂದು ನಿರ್ಧಾರಕ್ಕೆ ಬರುವಾಗ ಪರಿಸರವಾದಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಪ್ರಯತ್ನ ಮಾಡುತ್ತದೆ. ಆದರೆ ಈಗ ಸರ್ಕಾರವು ಪರಿಸರವಾದಿಗಳ ಮೇಲೆ ರೋಡ್‌ರೋಲರ್ ಉರುಳಿಸುವ ಮಟ್ಟಿಗೆ ಕಠಿಣ ಹೃದಯಿಯಾಗಿ ಯೋಚನೆ ಮಾಡುತ್ತಿದೆ. ಈ ಯೋಜನೆಯನ್ನು ಕರ್ನಾಟಕ ಸರ್ಕಾರ ಕೈಗೆತ್ತಿಕೊಳ್ಳದಿದ್ದರೆ ಅದನ್ನು ಬೇರೆ ರಾಜ್ಯಕ್ಕೆ ವರ್ಗಾಯಿಸಲಾಗುವುದೆಂಬ ಹೆದರಿಕೆಯನ್ನು ಕೇಂದ್ರ ಸರ್ಕಾರ ಕರ್ನಾಟಕಕ್ಕೆ ತೋರಿಸುತ್ತಿದೆ. ಈ ಕಾರಣದಿಂದಾಗಿಯೂ ಸಹ ಕರ್ನಾಟಕ ಸರ್ಕಾರ ಬಿಕ್ಕಟ್ಟಿನ ಸ್ಥಿತಿಗೆ ಸಿಕ್ಕಿಕೊಂಡಿದೆ. ಅಭಿವೃದ್ಧಿಯ ಹೆಸರಿನಲ್ಲಿ ಕೇಂದ್ರಸರ್ಕಾರವು ರಾಜ್ಯ ಸರ್ಕಾರಗಳ ಮಧ್ಯೆ ಅಹಿತಕರ ಸ್ಪರ್ಧೆಯನ್ನೆ ಹುಟ್ಟುಹಾಕಿದೆ.

ಇಲ್ಲಿ ಮುಖ್ಯವಾಗಿ ಇರುವ ಸಮಸ್ಯೆ ಅಭಿವೃದ್ಧಿ ಎಂಬ ಮರೀಚಿಕೆ. ಅಭಿವೃದ್ಧಿ ಎಷ್ಟುದೂರ, ಯಾವ ಪ್ರಮಾಣದಲ್ಲಿ, ಎಷ್ಟು ಬೆಲೆ ತೆತ್ತು ಮತ್ತು ಯಾರ ಹಿತಕ್ಕಾಗಿ ಎಂಬ ಬಗ್ಗೆ ಯಾವುದೂ ನಿಖರವಾಗಿಲ್ಲದಿರುವುದು ಒಂದು ಜಟಿಲ ಸಮಸ್ಯೆಯಾಗಿದೆ. ಪಾಶ್ಚಿಮಾತ್ಯ ದೇಶಗಳು ಸಾಧಿಸಿರುವ ಅಭಿವೃದ್ಧಿಯೆ ಎಲ್ಲ ದೇಶಗಳಿಗೂ ಮಾದರಿಯಾಗುತ್ತಾ ಹೋದರೆ ಇರುವ ಈ ಒಂದೇ ಭೂಮಿಯು ಎಲ್ಲ ದೃಷ್ಟಿಕೋನಗಳಿಂದ ನಾಶವಾಗಿ ಹೋಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಅಲ್ಲದೆ ಆಧುನಿಕ ಅಭಿವೃದ್ಧಿಯ ಕಲ್ಪನೆಯಿಂದಾಗಿ ಸಮಾಜದಲ್ಲಿ ಆರ್ಥಿಕ ಅಸಮಾನತೆ, ಪರಿಸರ ವಿನಾಶ, ಬೃಹತ್ ನಗರಗಳ ನಿರ್ಮಾಣ, ಮಾನವೀಯ ಮೌಲ್ಯಗಳ ಕುಸಿತ, ರಾಜಕೀಯ ಶಕ್ತಿಯ ಕೇಂದ್ರೀಕರಣ, ಸರ್ವನಾಶಕ ಶಕ್ತಿಯ ಅಸ್ತ್ರಗಳ ನಿರ್ಮಾಣ, ಸಾಂಸ್ಕೃತಿಕ ಮಲಿನತೆ ಇತ್ಯಾದಿಗಳು ತಲೆದೋರುತ್ತಿವೆ. ಎಲ್ಲಿಯವರೆಗೆ ಅಭಿವೃದ್ಧಿಯ ತಪ್ಪು ಕಲ್ಪನೆಯಿರುತ್ತದೊ ಮತ್ತು ಭೌತಿಕ ಪ್ರಗತಿಗಾಗಿ ಹಾಹಾಕಾರವಿರುತ್ತದೊ ಅಲ್ಲಿಯವರೆಗೆ ಅಭಿವೃದ್ಧಿ ಎಂಬ ಭಸ್ಮಾಸುರನ ನೃತ್ಯ

ನಡೆಯುತ್ತಲೆ ಇರುತ್ತದೆ. ತದಡಿ ಯೋಜನೆಯಂಥದಂತೂ ಭಯಂಕರವಾಗಿ ಆಪತ್ಕಾರಿಯಾಗಿದೆ, ಆ ಯೋಜನೆಯು ಏಕಲಾಲಕ್ಕೆ ಪ್ರಕೃತಿ ಸಂಪತ್ತನ್ನು, ಪ್ರಾಣಿಸಂಕುಲಗಳನ್ನು, ಜನರ ಆರೋಗ್ಯವನ್ನು ಹಾಳು ಮಾಡುವಂಥದ್ದಾಗಿದೆ. ಈ ಯೋಜನೆಯಿಂದ ಸಮುದ್ರದಲ್ಲಿಯ ಜಲಚರಗಳು ಸಹ ತಮ್ಮ ಅಸ್ತಿತ್ವದ ಅಪಾಯದ ಹಂತಕ್ಕೆ ಮುಟ್ಟಲಿವೆ. ಈಗ ಭಾರತದಲ್ಲಿರುವ ಎಲ್ಲ ಉಷ್ಣ ವಿದ್ಯುತ್ ಸ್ಥಾವರಗಳಿಂದಾಗಿ ಆಗಿರುವ ದುಷ್ಪರಿಣಾಮಗಳ ವ್ಯವಸ್ಥಿತ ವೈಜ್ಞಾನಿಕ ಸಮಗ್ರ ಅಧ್ಯಯನ ನಡೆದಲ್ಲಿ ಇಂಥ ಯೋಜನೆಗಳಿಂದ ಆಗಿರುವ ಅಪಾರವಾದ ನಷ್ಟದ ಕಲ್ಪನೆ ಜನತೆಗೆ ಬಂದೀತು. ಜನರು ಸಹ ತಮ್ಮ ಜೀವನಶೈಲಿಯನ್ನು ಬದಲಾಯಿಸಿಕೊಳ್ಳಬೇಕಾದುದು ತುಂಬಾ ಅಗತ್ಯವಾಗಿದೆ. ವಿದ್ಯುತ್ ಶಕ್ತಿಯಿಲ್ಲದೆ ತಮ್ಮ ಜೀವನ ನಡೆಯುವುದೇ ಇಲ್ಲವೆಂಬ ಪರಿಸ್ಥಿತಿಯನ್ನು ತೊಲಗಿಸಬೇಕಾಗಿದೆ. ಎಷ್ಟು ಕಡಿಮೆ ವಿದ್ಯುತ್ ಶಕ್ತಿಯನ್ನು ಮತ್ತು ಇತರೆ ಅನಿಲಾಧಾರಿತ ಶಕ್ತಿಗಳನ್ನು ಉಪಯೋಗಿಸಿಕೊಂಡು ಜೀವನ ನಡೆಸಲು ಸಾಧ್ಯವೋ ಅಷ್ಟೊಂದು ಸರಳ ರೀತಿಯಲ್ಲಿ ಜೀವನ ನಡೆಸಲು ಜನರು ಪ್ರಯತ್ನಿಸಬೇಕಾಗಿರುವುದು ತುಂಬಾ ಅಗತ್ಯವಾಗಿದೆ. ತಮ್ಮ ಜೀವನವನ್ನೇ ಅಪಾಯಕ್ಕೆ ಒಡ್ಡಿ ಸುಖಪಡಬೇಕೆಂಬ ಆಶೆಯೆ ಆಪತ್ಕಾರಿಯಾಗಿದೆಯೆಂಬ ವಿಚಾರ ಜನತೆಯಲ್ಲಿ ಮೂಡಬೇಕು. ಈ ನಿಟ್ಟಿನಲ್ಲಿ ದೇಶದ ಎಲ್ಲ ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು, ಸ್ವಯಂಸೇವಾ ಸಂಸ್ಥೆಗಳು, ರಾಜಕೀಯ ಪಕ್ಷಗಳು, ಮಠಮಾನ್ಯಗಳು ಒಂದು ದೊಡ್ಡ ಜಾಗೃತಿ ಆಂದೋಲನವನ್ನೆ ನಡೆಸಬೇಕು. ಈಗ ಯಾವ ರೀತಿಯಲ್ಲಿ ಪೋಲಿಯೊ ನಿರ್ಮೂಲನಾ ಆಂದೋಲನ ನಡೆಸಿ ಪ್ರತಿವರ್ಷವೂ ಪೋಲಿಯೋದ ಪ್ರಮಾಣ ಕಡಿಮೆಯಾಗುತ್ತಿರುವ ಬಗ್ಗೆ ಅಂಕಿ ಸಂಖ್ಯೆಗಳನ್ನು ಗಮನಿಸಲಾಗುತ್ತದೊ ಅದೇ ರೀತಿ ಪರಿಸರವಿನಾಶದ ವಿರುದ್ಧದ ಚಳುವಳಿ ಮತ್ತು ಪ್ರಸ್ತುತ ಜೀವನ ಶೈಲಿ ಪದ್ಧತಿ ವಿರುದ್ಧದ ಜಾಗ್ರತಿ ಚಳುವಳಿ ಇವೆಲ್ಲವುಗಳ ಕಾರಣದಿಂದ ಜನರ ಜೀವನ ಶೈಲಿ ಯಾವ ಪ್ರಮಾಣದಲ್ಲಿ ಬದಲಾಗುತ್ತದೆಂಬುದನ್ನು ಗಮನಿಸಬೇಕು. ವಿದ್ಯುತ್ ಶಕ್ತಿ ಮತ್ತು ಇತರೆ ತೈಲಶಕ್ತಿಗಳ ಉಪಯೋಗದ ಪ್ರಮಾಣ ಕಡಿಮೆಯಾಗುತ್ತಿದೆಯೆ ಎಂಬುದನ್ನು ಗಮನಿಸಬೇಕು. ಅದಕ್ಕೆ ತಕ್ಕಂತೆ ಜೀವನ ಶೈಲಿ ಬದಲಾವಣೆಯ ಆಂದೋಲನವನ್ನು ತೀವ್ರಗೊಳಿಸಬೇಕು. ಇದರೊಂದಿಗೆ ಜನಸಂಖ್ಯಾ ಸ್ಫೋಟದ ನಿಯಂತ್ರಣದ ಪ್ರಯತ್ನವೂ ನಡೆಯಬೇಕು. ಇದು ಇಂದಿನ ಯುಗಧರ್ಮ.

***

ಹಳ್ಳಿಗಳು ಮಾರಾಟಕ್ಕಿವೆ, ಗ್ರಾಮಗಳ ನಿರಾಶೆ ಹೆಚ್ಚುತ್ತಿದೆ

-ದೇವಿಂದರ್ ಶರ್ಮ

ಮೇಲ್ಕಾಣಿಸಿದ ಪರಿಸ್ಥಿತಿ ಹೆಚ್ಚಾಗುತ್ತಲೆ ಇದೆ. ವ್ಯವಸಾಯದಲ್ಲಿ ಮುಂಚೂಣಿಯಲ್ಲಿದ್ದ ಪಂಜಾಬ್ ರಾಜ್ಯಕ್ಕೆ ಮೊದ ಮೊದಲು ಈ ಪರಿಸ್ಥಿತಿ ಸೀಮಿತವಾಗಿತ್ತು. ಈಗ ಗ್ರಾಮಗಳಲ್ಲಿ ಉಂಟಾಗುತ್ತಿರುವ ನಿರಾಶೆಯ ಕಾರಣದಿಂದಾಗಿ ಹಳ್ಳಿಗಳ ಮಾರಾಟದ ಸಂಖ್ಯೆ ಹೆಚ್ಚಾಗುತ್ತಲಿದೆ. ಮಧ್ಯ ಭಾರತದ ಒಂದು ಹಿಂದುಳಿದ ಹಳ್ಳಿಯಾದ ದೊರ್ಲಿ ಕೂಡ ಇಂಥ ಒಂದು ಹಳ್ಳಿ. ಇದು ಮಹಾರಾಷ್ಟ್ರದ ವಾರ್ಧ ಜಿಲ್ಲೆಯಲ್ಲಿದೆ. ಹಳ್ಳಿಗಳಿಗೆ ಬಂದಿರುವ ವಿಪತ್ತಿನ ಬಗ್ಗೆ ಎಚ್ಚರಿಸುವ ಕಹಳೆಯನ್ನಿದು ಊದಿದೆ. ಪಂಜಾಬ್‌ನಲ್ಲಿಯ ಆರು ಹಳ್ಳಿಗಳು ಮಾರಾಟದ ಪಂಜಕ್ಕೆ ಗುರಿಯಾಗಿವೆ. ಇವು ಸಂಗ್ರೂರ್ ಜಿಲ್ಲೆಯಲ್ಲಿರುವ ಭೂತಲ್‌ಕಲಾನ್ ಮತ್ತು ಭೂತಲ್‌ಕೋರ್. ಮನ್ಸಾ ಜಿಲ್ಲೆಯಲ್ಲಿರುವ ಮಲಸಿಂಗ್‌ವಾಲ. ಬಟಿಂಡಾ ಜಿಲ್ಲೆಯಲ್ಲಿರುವ ಹರಕಿಷನ್‌ಪುರ, ಮಂದಿಕುರ್ದ್ ಮತ್ತು ರಮನ್‌ವಾಸ್.

ರಾಷ್ಟ್ರೀಯ ಅಂಕಿ ಸಂಖ್ಯಾ ಸಂಸ್ಥೆಯು ಇತ್ತೀಚೆಗೆ ಪ್ರಕಟಿಸಿರುವ ವರದಿಯ ಪ್ರಕಾರ ಶೇ೪೦ ರಷ್ಟು ಹಳ್ಳಿಗಳು ರೈತರು ವ್ಯವಸಾಯವನ್ನು ತ್ಯಜಿಸಲು ಕಾತುರರಾಗಿದ್ದಾರೆ ಎಂಬ ವರದಿ ಪ್ರಕಟಗೊಳ್ಳುತ್ತಿರುವ ಬೆನ್ನಲ್ಲೇ ಹಳ್ಳಿಗಳು ಮಾರಾಟಕ್ಕಿವೆಯೆಂಬ ಅಂಶ ಬೆಳಕಿಗೆ ಬಂದಿದೆ. ಮೊದಲನೆಯ ಹಸಿರು ಕ್ರಾಂತಿ ವಿಫಲವಾಗಿದೆಯೆಂಬುದನ್ನು ಇದು ಸೂಚಿಸುತ್ತಿದೆ. ಗ್ರಾಮೀಣ ಪ್ರದೇಶದಲ್ಲಿ ಬೆಳೆಯುತ್ತಿರುವ ನಿರಾಶೆ ಇಡೀ ವ್ಯವಸಾಯ ಕ್ರಮದ ಲೆಕ್ಕಾಚಾರವೆ ತಪ್ಪಾಗಿದೆಯೆಂಬುದನ್ನು ಇದು ತೋರಿಸುತ್ತದೆ. ತೀವ್ರತಮವಾದ ವ್ಯವಸಾಯ ಪದ್ಧತಿಯಿಂದಾಗಿ ಕೃಷಿಯ ಮೂಲಭೂತ ಆಧಾರವಾದ ಮಣ್ಣಿನ ಉಸಿರಾಟಕ್ಕೆ ತೊಂದರೆಯಾಗಿರುವುದು; ಮೀತಿಮೀರಿದ ಪ್ರಮಾಣದಲ್ಲಿ ಅಂತರ್ಜಲವನ್ನು ಹೊರತೆಗೆದಿರುವುದು ಮತ್ತು ಕ್ರಿಮಿನಾಶಕಗಳು ಪರಿಸರವನ್ನು ಹಾಳು ಮಾಡಿದ್ದರಿಂದ ಬಹಳಷ್ಟು ರೈತರು ಸಾಲದಲ್ಲಿ ಸಿಕ್ಕಿಹಾಕಿಕೊಳ್ಳುತ್ತಿದ್ದಾರೆ. ಅವರಲ್ಲಿ ಬಹಳಷ್ಟು ರೈತರು ತಮ್ಮ ಮೂತ್ರಪಿಂಡವನ್ನು ಮಾರುತ್ತಾರೆ ಇಲ್ಲವೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಕೃಷಿವಲಯದಲ್ಲಿ ಈ ಮೊದಲು ಎಂದೂ ಉದ್ಭವಿಸದೆ ಇದ್ದ ಆಪತ್ಕಾರಿ ಪರಿಸ್ಥಿತಿಯನ್ನು ಅರಿತುಕೊಳ್ಳಲು ವಿಫಲವಾಗಿರುವ ಸರ್ಕಾರ ಹತಾಶವಾಗಿ ಎರಡನೆಯ ಹಸಿರು ಕ್ರಾಂತಿಯನ್ನು ಪ್ರಾರಂಭಿಸಲು ಪ್ರಯತ್ನಿಸುತ್ತಿದೆ. "ಗ್ರಾಮೀಣ ಭಾರತಕ್ಕೆ ಹೊಸಕಾಣಿಕೆ" ಎಂದೆಲ್ಲ ಪ್ರಧಾನ ಮಂತ್ರಿ ಮನಮೋಹನ್‌ಸಿಂಗ್‌ರವರು ಕರೆಯುವ ಎರಡನೆ ಹಸಿರು ಕ್ರಾಂತಿಯು ನಿಜವಾಗಿಯೂ ಅಮೇರಿಕಾದ

ಪ್ರಚೋದನೆಯಿಂದಲೆ ಪ್ರಾರಂಭವಾದುದಂತಾಗಿದೆ. ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬುನಾಯ್ಡು ರವರು "೨೦೨೦ರ ದೂರದರ್ಶಿತ್ವ" ಎಂದು ಕರೆದು ವಿಫಲವಾಗಿದ್ದ ಯೋಜನೆಯ ರೀತಿಯಲ್ಲಿಯೆ 'ಗ್ರಾಮೀಣ ಭಾರತಕ್ಕೆ ಹೊಸ ಕಾಣಿಕೆ' ಎಂದು ಪ್ರಧಾನಿಯವರು ಕರೆಯುವ ಯೋಜನೆಯೂ ಆಗಿದೆ.

ಅಮೇರಿಕಾದಲ್ಲಿ ಎರಡನೆಯ ಹಸಿರು ಕ್ರಾಂತಿಯ ಮಾತನ್ನಾಡಲಾಗುತ್ತಿದೆ. ಮತ್ತು ಅದನ್ನು ಪ್ರಚುರಗೊಳಿಸಲಾಗುತ್ತಿದೆ. ಇದು ಬಹಳ ದೊಡ್ಡ ಪ್ರಮಾಣದ ರಿಯಾಯಿತಿಯನ್ನವಲಂಬಿಸಿದೆ. ಪ್ರತಿ ವರ್ಷ ೭೫ ಬಿಲಿಯನ್ ಡಾಲರ್‌ಗಳಷ್ಟು ಹಣವನ್ನು ಈ ಹಸಿರು ಕ್ರಾಂತಿಯಲ್ಲಿ ಸುರಿಯತ್ತಿದ್ದಾಗಲೂ ಸಹ ಅಮೇರಿಕಾದಲ್ಲಿಯ ರೈತರು ವ್ಯವಸಾಯ ಕ್ಷೇತ್ರದಿಂದ ನಿರ್ಗಮಿಸುವುದನ್ನೆ ಅಪೇಕ್ಷಿಸುತ್ತಿದ್ದಾರೆ. ಈ ರಿಯಾಯಿತಿಗಳನ್ನು ತೆಗೆದು ಹಾಕಿದ್ದೆ ಆದಲ್ಲಿ ಅಮೆರಿಕಾದ ವ್ಯವಸಾಯವು ಇಸ್ಪೀಟಿನ ಮನೆಯಂತೆ ಕುಸಿದು ಬೀಳುವುದರಲ್ಲಿ ಸಂಶಯವಿಲ್ಲ. ಅಮೇರಿಕಾದ ರೈತರುಸಹ ವ್ಯವಸಾಯವನ್ನು ಕೈ ಬಿಡುತ್ತಿದ್ದಾರೆ. ೨೦೦೨ರಲ್ಲಿ ೭ ಲಕ್ಷ ರೈತರು ವ್ಯವಸಾಯವನ್ನು ಬಿಟ್ಟಿದ್ದರು. ಮುಂದೆ ೨೦೦೪ರ ವೇಳೆಗೆ ಅಂದರೆ ಕೇವಲ ೨ ವರ್ಷಗಳ ಅವಧಿಯೊಳಗಾಗಿ ೯ ಲಕ್ಷ ರೈತರು ವ್ಯವಸಾಯವನ್ನು ಬಿಟ್ಟಿದ್ದಾರೆ.

ಯೂರೋಪ್ ಯೂನಿಯನ್‌ನಲ್ಲಿಯೂ ಕೂಡ ಪರಿಸ್ಥಿತಿ ಇದಕ್ಕಿಂತ ಉತ್ತಮವಾಗಿಲ್ಲ. ರೈತರಿಗೆ ನೇರವಾಗಿ ರಿಯಾಯಿತಿಗಳು ದೊರೆಯುತ್ತಿದ್ದರೂ ಸಹ ಇಂಥ ಆಪತ್ಕಾರಿ ಪರಿಸ್ಥಿತಿಯಿದೆ. ಗ್ರಾಮಾಂತರ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳಿರುವಾಗ ಮತ್ತು ರೈತರು ಬೆಳೆದ ಪದಾರ್ಥಗಳೊಂದಿಗೆ ಚಿಲ್ಲರೆ ವ್ಯಾಪಾರ ವ್ಯವಸ್ಥೆಯ ಸಂಬಂಧ ಉಂಟಾಗಿರುವಾಗ ವ್ಯವಸಾಯವು ಇನ್ನೂ ನಷ್ಟದತ್ತ ಮುಖ ಮಾಡಿರುವುದಕ್ಕೆ ಕಾರಣವೇನು? ವ್ಯಾಪಾರಿ ವ್ಯವಸಾಯದ ಸಾಮರ್ಥ್ಯ ಮತ್ತು ಆರ್ಥಿಕ ಸಂಗತಿಗಳ ಮಾದರಿಯನ್ನು ಪ್ರಶ್ನಿಸದೆ ಅಂಥ ವ್ಯವಸ್ಥೆಯನ್ನು ಭಾರತ ಸಮಾರೋಪಾದಿಯಾಗಿ ತನ್ನದಾಗಿ ಮಾಡಿಕೊಳ್ಳುತ್ತಿದೆ. ಇದರ ಹಿಂದೆ ಇರುವ ಉದ್ದೇಶ ಸ್ಪಷ್ಟವಾಗಿಯೆ ಇದೆ. ಅಂದರೆ ರೈತರು ವ್ಯವಸಾಯ ಕ್ಷೇತ್ರದಿಂದ ಹೊರಬೀಳಬೇಕು. ಆದರೆ ಅಮೆರಿಕಾ ಮತ್ತು ಯೂರೋಪ್‌ನಲ್ಲಿರುವಂತೆ ಭಾರತೀಯ ಜನಸಮುದಾಯಕ್ಕೆ ವ್ಯವಸಾಯವಲ್ಲದೆ ಉದ್ಯೋಗದ ಬೇರೆ ಪರ್ಯಾಯ ಸಾಧನಗಳಿಲ್ಲ.

ಸಾಮಾಜಿಕ ಮತ್ತು ಆರ್ಥಿಕ ಪರಿಣಾಮಗಳ ಬಗ್ಗೆ ಚಿಂತೆ ಮಾಡದೆ ಅಮೆರಿಕಾ ಮಾದರಿಯನ್ನು ನಾವು ಅಂಧರಂತೆ ಅನುಕರಿಸಲು ಸಾಧ್ಯವಿಲ್ಲ. ವ್ಯವಸಾಯದ ಬಗ್ಗೆ ವಿಶ್ವಬ್ಯಾಂಕ್ ರೂಪಿಸಿರುವ ಮಾದರಿಯನ್ನು ಕರ್ನಾಟಕ ಮತ್ತು ಆಂಧ್ರಪ್ರದೇಶ ಒಪ್ಪಿಕೊಂಡು ಕೈಗಾರಿಕೆಯ ತೊತ್ತಾಗುವಂಥ ವ್ಯವಸಾಯ ಕ್ಷೇತ್ರದಲ್ಲಿ ಬೃಹತ್ ಪ್ರಮಾಣದ ಹಣವನ್ನು ತೊಡಗಿಸಿವೆ. ಇದು ಈಗಾಗಲೆ ಇರುವ ಗಂಡಾಂತರಕಾರಿ ಪರಿಸ್ಥಿತಿಯನ್ನು ಇನ್ನೂ ತೀವ್ರಗೊಳಿಸಿದೆಯಲ್ಲದೆ

ಪರಿಸರಕ್ಕೂ ಗಂಡಾಂತರವನ್ನು ತಂದೊಡ್ಡಿದೆ. ಜೊತೆಗೆ ಗ್ರಾಮೀಣ ಬದುಕನ್ನು ಹಾಳು ಮಾಡಿದೆ.

ಹೀಗಿದ್ದಾಗ್ಯೂ ಇನ್ನೂ ಬೇರೆ ೧೯ ರಾಜ್ಯಗಳು ವ್ಯವಸಾಯೋತ್ಪನ್ನ ಮಾರುಕಟ್ಟೆ ಕಾನೂನ್ನು ತಿದ್ದುಪಡಿ ಮಾಡಲು ತಮ್ಮ ಸಹಮತವನ್ನು ವ್ಯಕ್ತಪಡಿಸಿವೆ. ಹೀಗೆ ಮಾಡುವುದರಿಂದ ಗುತ್ತಿಗೆ ವ್ಯವಸಾಯವು ಜಾರಿಗೆ ಬರುವುದಲ್ಲದೆ ರೈತರು ತಮ್ಮ ಉತ್ಪಾದನೆಗಳನ್ನು ನೇರವಾಗಿ ಖಾಸಗಿ ಕಂಪನಿಗಳಿಗೆ ಮಾರಾಟ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿದಂತಾಗುತ್ತದೆ. ಗುತ್ತಿಗೆ ವ್ಯವಸಾಯದಲ್ಲಿ ತೀವ್ರತಮವಾಗಿ ಬೆಳೆ ಬೆಳೆಯುವ ವಿಧಾನವಿರುತ್ತದೆ. ಈ ರೀತಿಯ ವ್ಯವಸಾಯಕ್ಕೆ ವಾಡಿಕೆಗಿಂತ ಶೇ೧೫ ರಿಂದ ೨೦ ರವರೆಗೆ ಹೆಚ್ಚು ಪ್ರಮಾಣದಲ್ಲಿ ರಾಸಾಯನಿಕ ಪದಾರ್ಥಗಳನ್ನು ಉಪಯೋಗಿಸಿಕೊಳ್ಳಬೇಕಾಗುತ್ತದೆ. ರಾಸಾಯನಿಕ ಪದಾರ್ಥಗಳನ್ನು ಉಪಯೋಗಿಸಿದಂತೆಲ್ಲ ಹೆಚ್ಚು ನೀರಿನ ಅಗತ್ಯವುಂಟಾಗುತ್ತದೆ. ಆಗ ಗುತ್ತಿಗೆ ವ್ಯವಸಾಯವು ಹಾನಿಕಾರಕವಾಗುತ್ತದೆ. ನಾಲ್ಕರಿಂದ ಐದು ವರ್ಷಗಳೊಳಗಾಗಿ ಅದು ಭೂಮಿಯನ್ನು ಬಂಜರುಗೊಳಿಸುತ್ತದೆ ಅದರಿಂದಾಗಿ ರೈತರ ಕಷ್ಟಗಳು ಹೆಚ್ಚುತ್ತಾ ಹೋಗುತ್ತವೆ. ಈಗ ತುರ್ತಾಗಿ ಆಗಬೇಕಾದ ಕೆಲಸವೇನೆಂದರೆ ಗ್ರಾಮೀಣ ಪ್ರದೇಶದಲ್ಲಿಯ ಸ್ವಾಭಾವಿಕ ಸಂಪನ್ಮೂಲಗಳನ್ನು ಪುನಶ್ಚೇತನಗಳಿಸುವುದು. ತನ್ಮೂಲಕ ಆರ್ಥಿಕ ನಷ್ಟವಿಲ್ಲದ ಜೀವನವನ್ನು ಗ್ರಾಮೀಣ ಜನರಿಗೆ ಒದಗಿಸುವುದು. ಹೀಗೆ ಮಾಡದೆ ಹೋದಲ್ಲಿ ಇನ್ನೂ ಹೆಚ್ಚು ಹಳ್ಳಿಗಳು ಮಾರಾಟಕ್ಕಿವೆಯೆಂದು ಘೋಷಿಸಲ್ಪಡುವವು.

(ಸಾಭಾರ–ಹಿಂದೂ) ಅನು–ಸು.ಕೌ

***

ಮತಿಗೆಟ್ಟ ಮಾನವ

ನೀ ಮಾಡಿದೆ ಅರಣ್ಯಗಳ ನಾಶ
ಇದೇ ನಿನ್ನ ಸ್ವಧರ್ಮವೆ ಮನುಷ್ಯ?
ನೀ ಹಾಕಿದೆ ಸ್ವಚ್ಛತೆಗೆ ಪಾಶ
ಅಲ್ಲಿ ಆಯಿತು ಆರೋಗ್ಯದ ನಾಶ
ಇದರಿಂದ ದೊರಕಿತೆ ನಿನಗೆ ಹರುಷ
ನೀ ಬದುಕಲಾರೆ ಬಹಳ ವರುಷ

–ಕಾರ್ತಿಕ್

ಕನ್ನಡದ ಸ್ಥಿತಿ ಗತಿ

-ಜಿ.ಟಿ. ನಾರಾಯಣರಾವ್

ದೇಶಕ್ಕೆ ಸ್ವಾತಂತ್ರ್ಯ ಲಭಿಸಿದ ಅನಂತರ ಮತ್ತು ಕರ್ನಾಟಕ ಏಕೀಕರಣವಾದ ಬಳಿಕ, ಕನ್ನಡ ಸರ್ವಾಂಗ ಸುಂದರವಾಗಿ ಎಲ್ಲ ಜ್ಞಾನ ವಿಜ್ಞಾನ ಪ್ರಕಾರಗಳ ಸಮರ್ಥ ಸಂವಹನ ಮಾಧ್ಯಮವಾಗಿ ಅಭಿವರ್ಧಿಸಿತು. ವಿಜ್ಞಾನಕ್ಷೇತ್ರ ಕುರಿತು ಹೇಳುವುದಾದರೆ ಯಾವುದೇ ಅತ್ಯಾಧುನಿಕ ಸಂಕೀರ್ಣ ಪರಿಕಲ್ಪನೆಯನ್ನೂ ಇದರಲ್ಲಿ ಮೂಲ ಇಂಗ್ಲಿಷಿನಲ್ಲಿಯಷ್ಟೇ ಖಚಿತವಾಗಿ, ಸ್ಪಷ್ಟವಾಗಿ ಮತ್ತು ಆಕರ್ಷಕವಾಗಿ ನಿರೂಪಿಸುವುದು ಸಾಧ್ಯವೆಂಬುದನ್ನು ತೋರಿಸಿಕೊಟ್ಟಿತು. ಉದಾಹರಣೆಗೆ ವಿಶ್ವವಿದ್ಯಾಲಯಗಳು ಪ್ರಕಟಿಸಿದ ಆಕರಗ್ರಂಥಗಳು, ಪಠ್ಯಪುಸ್ತಕಗಳು ಮತ್ತು ಜನಪ್ರಿಯ ಕೃತಿಗಳು, ಆರ್.ಎಲ್. ನರಸಿಂಹಯ್ಯ, ಸಿ.ಎನ್. ಶ್ರೀನಿವಾಸ ಅಯ್ಯಂಗಾರ್, ಬೆಳ್ಳಾವೆ ವೆಂಕಟನಾರಣಪ್ಪ, ನಂಗಪುರಂ ವೆಂಕಟೇಶ ಅಯ್ಯಂಗಾರ್, ಯು.ಎಲ್.ಆಚಾರ್ಯ, ಜೆ.ಆರ್.ಲಕ್ಷ್ಮಣರಾವ್, ಅಡ್ಯನಡ್ಕಕೃಷ್ಣಭಟ್ಟ, ಅನುಪಮಾ ನಿರಂಜನ ಮೊದಲಾದ ಹಿರಿಯರ ಕೊಡುಗೆಗಳು, ಶಿವರಾಮ ಕಾರಂತರ 'ಬಾಲಪ್ರಪಂಚ'ದ ಒಟ್ಟು ೧೮೦೦ ಪುಟಗಳ ಮೂರು ಸಂಪುಟಗಳು (೧೯೩೬), 'ವಿಜ್ಞಾನ ಪ್ರಪಂಚ'ದ ಒಟ್ಟು ೧೯೬೪ ಪುಟಗಳ ನಾಲ್ಕು ಸಂಪುಟಗಳು (೧೯೫೯-೬೪), ನಿರಂಜನರ ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟವಾದ 'ಜ್ಞಾನಗಂಗೋತ್ರಿ'ಯ ಒಟ್ಟು ೪೯೯೧ಪುಟಗಳ ಏಳು ಸಂಪುಟಗಳು ಮತ್ತು ಕಳಶಪ್ರಾಯವಾಗಿ ಮೈಸೂರು ವಿಶ್ವ ವಿದ್ಯಾನಿಲಯ ೧೯೬೩ರಿಂದ ಅನಿಯತಕಾಲವಾಗಿ ಪ್ರಕಟಿಸುತ್ತಿರುವ 'ಕನ್ನಡ ವಿಶ್ವಕೋಶ'ದ ೧೪ ಸಂಪುಟಗಳು (ಪ್ರತಿಯೊಂದು ಸರಾಸರಿ ೧೦೦೦ ಪುಟಗಳ ಗ್ರಂಥ), 'ವಿಷಯ ವಿಶ್ವಕೋಶ'ದ ೩೦ ಸಂಪುಟಗಳ ಯೋಜನೆ (ಸದ್ಯಕ್ಕೆ ಒಂದು ಪ್ರಕಟವಾಗಿದೆ, ಇನ್ನೆರಡು ಸದ್ಯವೇ ಹೊರಬರಲಿವೆ). ಕನ್ನಡದ ಶ್ರೀಮಂತಿಕೆಯನ್ನು ಎತ್ತಿಕಾಣಿಸುತ್ತಿವೆ. ನಮ್ಮ ರಾಜ್ಯದ ಇತರ ವಿಶ್ವವಿದ್ಯಾಲಯಗಳೂ ಈ ದಿಶೆಯಲ್ಲಿ ಕಾರ್ಯತತ್ಪರವಾಗಿವೆ. ಶಿವರಾಮಕಾರಂತರ ಗೌರವ ಸಹಾಯಕನಾಗಿ, 'ಜ್ಞಾನಗಂಗೋತ್ರಿ'ಯ ಸಂಪಾದಕಮಂಡಲಿ ಸದಸ್ಯನಾಗಿ ಮತ್ತು 'ಕನ್ನಡ ವಿಶ್ವಕೋಶ'ದ ವಿಜ್ಞಾನ-ಮತ್ತು-ಕಾರ್ಯನಿರ್ವಾಹಕ ಸಂಪಾದಕನಾಗಿ ಈ ಎಲ್ಲ ಯೋಜನೆಗಳಲ್ಲಿಯೂ ಪಾಲ್ಗೊಳ್ಳುವ ಭಾಗ್ಯ ನನ್ನದಾಗಿತ್ತು. ನವಕರ್ನಾಟಕ ಪ್ರಕಾಶನದ ಪ್ರತಿಷ್ಠಿತ ಕೃತಿ 'ಕನ್ನಡ ವಿಜ್ಞಾನ ಪದವಿವರಣ ಕೋಶ' (೨೦೦೧) ಪಾರಿಭಾಷಿಕ ಪದಗಳ ಶಿಷ್ಟೀಕರಣಕ್ಕೆ ನೀಡಿರುವ ಚಾಲನೆ ಗಮನಾರ್ಹವಾಗಿದೆ. ಇದರ ಪ್ರಧಾನ ಸಂಪಾದಕನಾಗುವ ಗೌರವ ನನಗೆ ಸಂದಿತ್ತು.

ಇವೆಲ್ಲ ಅನುಭವಗಳ ಸಾರವಿಷ್ಟು: ಜ್ಞಾನ-ವಿಜ್ಞಾನಗಳಲ್ಲಿಯ ಸರ್ವ

ಪ್ರಕಾರಗಳ ಅಭಿವ್ಯಕ್ತಿಗೆ ಇಂದು ಇಂಗ್ಲಿಷಿನಷ್ಟೇ ಸಮರ್ಥ ಮಾಧ್ಯಮವಾಗಿದೆ ನಮ್ಮ "ಸುಲಿದ ಬಾಳೆಯ ಹಣ್ಣಿನಂದದ" ಕನ್ನಡ. ಇಂತಿದ್ದರೂ ವ್ಯಾವಹಾರಿಕವಾಗಿ ಕನ್ನಡದ ವರ್ತಮಾನ ಸ್ಥಿತಿ ಹೇಗಿದೆ? ಒಂದೇ ಪದದಲ್ಲಿ ಹೇಳುವುದಾದರೆ ಅದು ಶೋಚನೀಯ. ಏಕೆ? ಕನ್ನಡಿಗರ ಅಭಿಮಾನಶೂನ್ಯತೆ, ಸರ್ಕಾರದ ಸಂಕಲ್ಪರಾಹಿತ್ಯ, ಐಟಿ. ಬಿಟಿ ಇತ್ಯಾದಿ ವಿತ್ತಾಕರ್ಷಕ ಹುದ್ದೆಗಳ ಆಮಿಷ ಮುಂತಾದವುಗಳ ಸಂಯುಕ್ತ ತಾಂಡನೆಯ ವಿಷಫಲವಿದು. ಆದ್ದರಿಂದ ಕನ್ನಡ ವಿಜ್ಞಾನ ವಾಙ್ಮಯದ ವಿಷಯ ಹಾಗಿರಲಿ, ಸಾಕ್ಷಾತ್ ಕನ್ನಡದ ಭವಿಷ್ಯವೇ ಇಂದು ಡೋಲಾಯಮಾನವಾಗಿದೆ: ಪರಿಕರಗಳು ಸಮೃದ್ಧವಾಗಿವೆ, ಬಾಣಸಿಗರಿಲ್ಲ; ತಯಾರಾಗುವ ಅಡುಗೆ ಸವಿಯಲು ಬಾಯಿಗಳಿಲ್ಲ; ಉಂಡರೂ ಆ ವ್ಯಕ್ತಿಗೆ ಪ್ರಯೋಜನವಾಗುವ ಪರಿಸರವಿಲ್ಲ. ವಾಣಿಜ್ಯದ ಪರಿಭಾಷೆಯಲ್ಲಿ ಹೇಳುವುದಾದರೆ ಅಂಗಡಿಯ ಬಡುಗಳಲ್ಲಿ ಮಾಲುಗಳು ತುಂಬಿ ತುಳುಕುತ್ತಿವೆ, ದರ ಅಗ್ಗವಾಗಿದೆ, ಮಾರಾಟ ಸೇವೆ ಉತ್ತಮವಾಗಿದೆ, ಆದರೆ ಗಿರಾಕಿಗಳಿಲ್ಲ.

ಹೀಗೇಕೆ? ರಾಜ್ಯದಲ್ಲಿ ಕನಿಷ್ಠ ಎಸ್‌ಎಸ್‌ಎಲ್‌ಸಿ ತನಕ ಶಿಕ್ಷಣ ಮಾಧ್ಯಮ ಮತ್ತು ಆಡಳಿತಭಾಷೆ ಕನ್ನಡವಾದ ಹೊರತು ಪರಿಸ್ಥಿತಿ ಸುಧಾರಿಸದು, ಮಾತ್ರವಲ್ಲ, ಕಾಲ ಸಂದಂತೆ ವಿಕೋಪಿಸುತ್ತಿದೆ ಕೂಡ. ಇಂಗ್ಲಿಷ್ ಅಂತಾರಾಷ್ಟ್ರೀಯ ಭಾಷೆ, ಸಕಲ ಆಧುನಿಕ ಜ್ಞಾನಪ್ರಕಾರಗಳಿಗೂ ಸುಲಭ ಪ್ರವೇಶ ಒದಗಿಸುವ ಕೀಲಿಕೈ. ಇದರಲ್ಲಿ ಶಿಕ್ಷಣ ಪಡೆದವರಿಗೆ ಪ್ರಪಂಚದಾದ್ಯಂತ ಉದ್ಯೋಗ ಮತ್ತು ವ್ಯವಹಾರಾವಕಾಶಗಳಿವೆ, ಇಂಥ ನೇರ ದಾರಿ ಬಿಟ್ಟು ಇನ್ನೂ ಅಡುಗೆಮನೆಯಿಂದ ಹೊರಬಂದಿರದ ಕನ್ನಡವನ್ನು ಈ ಕೆಲಸಕ್ಕೆ ನಿಯೋಜಿಸಿದ್ದಾದರೆ ನಮ್ಮ ದೇಶ ತೀರ ಹಿಂದೆ ಬೀಳುವುದು ಶತಸ್ಸಿದ್ಧ ಎಂಬ ಶುಷ್ಕ ತರ್ಕವನ್ನು ಅಸಂಖ್ಯ ವೇದಿಕೆಗಳಲ್ಲಿ ಕನ್ನಡಿಗರಿಂದಲೇ ಕೇಳಿ ಕೇಳಿ ನನ್ನಂತೆ ಈ ಕ್ಷೇತ್ರದಲ್ಲಿ ಧೀರ್ಘಕಾಲದಿಂದ ಮಗ್ನರಾಗಿರುವ ಲೇಖಕರೆಲ್ಲರಿಗೂ ತಲೆ ಚಿಟ್ಟು ಹಿಡಿದುಹೋಗಿದೆ.

ಎರಡನೆಯ ಮಹಾಯುದ್ಧಾಂತ್ಯದಲ್ಲಿ ನೆಲಕಚ್ಚಿದ ಜಪಾನ್ ಇಂದು ಅಮೆರಿಕ, ಇಂಗ್ಲೆಂಡ್ ಮುಂತಾದ ಮುಂದುವರಿದ ರಾಷ್ಟ್ರಗಳ ಜೊತೆ ಶಿಕ್ಷಣ ಮತ್ತು ವಾಣಿಜ್ಯ ರಂಗಗಳಲ್ಲಿ ಯಶಸ್ವಿಯಾಗಿ ಸ್ಪರ್ಧಿಸುತ್ತಿರುವುದು ಸರಿಯಷ್ಟೆ. ಅಲ್ಲಿಯ ಶಿಕ್ಷಣಮಾಧ್ಯಮ ಜಪಾನೀಭಾಷೆ, ಇಂಗ್ಲಿಷ್ ಅಲ್ಲ! ಜನರಲ್ಲಿ ಅಸ್ಮಿತೆ ಅಂದರೆ ಸ್ವಾಭಿಮಾನ ವರ್ಧಿಸುವಂತೆ ಬಾಲ್ಯದಿಂದಲೇ ರಚನಾತ್ಮಕ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದೊಂದೇ ಶ್ರೀಸಾಮಾನ್ಯ ಮಾಡಬಹುದಾದ ಕೆಲಸ. ಪ್ರಕೃತ ಸಮ್ಮೇಳನ ಈ ದಿಶೆಯಲ್ಲೊಂದು ದಿಟ್ಟ ಹೆಜ್ಜೆ.

(ಕೊಡಗು ಜಿಲ್ಲಾ ೫ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಿಂದ)

***

ರವೀಂದ್ರನಾಥ್ ಠಾಕೂರ್

–ಕೆ. ರಾಘವೇಂದ್ರ ರಾವ್

ಮೇ ತಿಂಗಳು ೭ನೇ ತಾರೀಖು ರವೀಂದ್ರನಾಥ್ ಠಾಕೂರರ ಜಯಂತಿಯನ್ನು ಆಚರಿಸಲಾಯಿತು. ಅವರ ಸರ್ವತೋಮುಖ ವಿಚಾರಧಾರೆಗಳನ್ನು ಸಂಕ್ಷಿಪ್ತವಾಗಿ ಬರೆಯುವುದು ಆನೆಯನ್ನು ಕೈಕನ್ನಡಿಯಲ್ಲಿ ಸೆರೆಹಿಡಿಯುವ ಸಾಹಸವೇ ಸೈ. ಅವರ ವಿಚಾರಗಳು, ಕೃತಿಗಳು ಮತ್ತು ಚಟುವಟಿಕೆಗಳ ಬಗ್ಗೆ ಇನ್ನೂ ಹಲವಾರು ಸಂಶೋಧನೆಗಳು, ವಿಶ್ಲೇಷಣೆಗಳು, ಪರಾಮರ್ಶೆಗಳು ನಡೆಯುತ್ತಲೇ ಇವೆ. ಒಂದೆರಡು ಅಂಶಗಳನ್ನು ಮಾತ್ರ ಈಗ ಸ್ಥೂಲವಾಗಿ ಸಮೀಕ್ಷಿಸೋಣ.

ಅವರ ಪ್ರತಿಭೆ ಮೂಲತಃ ಆಧ್ಯಾತ್ಮಿಕ. ಅದು ಯಾವ ಒಂದು ಮತ ಅಥವಾ ಪಂಥದ್ದಲ್ಲ. ಹಿಂದೂ ಧರ್ಮದ ವಿಶಾಲದೃಷ್ಟಿ ಅವರದಾಗಿತ್ತು. ಅವರು ಹುಟ್ಟಿ ಬೆಳೆದ ಶ್ರೀಮಂತ ಮನೆತನ, ಆ ಕಾಲದ ಕಲ್ಕತ್ತಾ ನಗರದ ಉಚ್ಚ ಸಮಾಜದ ವಾತಾವರಣ. ರಾಜಾರಾಮ್ ಮೋಹನ್‌ರಾಯ್, ಪಂಡಿತ್ ಈಶ್ವರ ಚಂದ್ರ ವಿದ್ಯಾಸಾಗರ ಮೊದಲಾದವರಿಂದ ಶುರುವಾದ ಪುನರುತ್ಥಾನ ಪ್ರಯತ್ನಗಳು ಬ್ರಹ್ಮಸಮಾಜದ ವಿಚಾರಗಳು, ಇವೆಲ್ಲ ಅವರ ಮೇಲೆ ಪ್ರಭಾವ ಬೀರಿದ್ದವು. ಅವರು ದೇವರನ್ನು ಯಾವ ಒಂದು ಹೆಸರಿನಿಂದ ಕರೆದು ಪ್ರಾರ್ಥಿಸಲಿಲ್ಲ. ಎಲ್ಲೆಡೆಯೂ, ಎಲ್ಲದರಲ್ಲೂ ಅವನ ಅಸ್ತಿತ್ವವನ್ನು ಕಾಣಲು ಪ್ರಯತ್ನಿಸಿದರು. ನಮ್ಮ ನಾಡಿನ ಆಧ್ಯಾತ್ಮ ಗ್ರಂಥಗಳ ಪೈಕಿ ಕಠ ಮತ್ತು ಶ್ವೇತಾಶ್ವತರ ಉಪನಿಷತ್ತುಗಳು ಅವರ ವಿಚಾರ ಲಹರಿ ಮತ್ತು ಕವಿತೆಗಳ ಮೇಲೆ ತುಂಬಾ ಪ್ರಭಾವ ಬೀರಿವೆ. ಉಪನಿಷತ್ ಭಂಡಾರದಲ್ಲೇ ಕವಿತ್ವ, ರೂಪಕಗಳು ಮೊದಲಾದವನ್ನೆಲ್ಲಾ ಇವುಗಳಲ್ಲಿ ಕಾಣಬಹುದು. ಅಂತೆಯೇ ರವೀಂದ್ರನಾಥರೂ ಒಬ್ಬ ದ್ರಷ್ಟಾರರಾದರು. ಉಪನಿಷತ್ ಶೈಲಿಯೇ ಅವರದ್ದಾಯಿತು.

ಈ ವಿಶಾಲ ಮನೋಭಾವವೇ ಅವರ ಕವಿತೆಗಳು. ದೇಶ–ಕಾಲಾತೀತವಾಗಿ ವಿಶ್ವದಾದ್ಯಂತ ಮನ್ನಣೆ ಪಡೆದು ಸರ್ವಕಾಲಿಕವಾದವು. ಪ್ರಕೃತಿಯ ವಿವಿಧ ಮುಖಗಳಲ್ಲಿ, ಅತೀತನ ಸಾಮರಸ್ಯವನ್ನು ಎಲ್ಲರೂ ಕಾಣುತ್ತೇವೆ. ಆದರೆ ಅದನ್ನು ಅಭಿವ್ಯಕ್ತಗೊಳಿಸಲು ಬೇಕಾದ ಪ್ರತಿಭೆ ಮತ್ತು ಭಾಷಾ ಸಂಪತ್ತು ರವೀಂದ್ರರಿಗಿತ್ತು.

ಪರಮಾತ್ಮ–ಜೀವಾತ್ಮ ಸಂಬಂಧವನ್ನು ಭಾಷೆಯಲ್ಲಿ ಮೂಡಿಸಲು, ಪ್ರಿಯ–ಪ್ರೇಯಸಿ ರೂಪಕದ ಬಳಕೆ ನಮ್ಮ ದೇಶದಲ್ಲಿ ಋಗ್ವೇದದ ಉಷಃ ಸೂಕ್ತದ ಕಾಲದಿಂದಲೂ ಬಂದಿದೆ. ತಮಿಳು ಆಳ್ವಾರರ ದಿವ್ಯ ಪ್ರಬಂಧಗಳು, ಸೂಫಿಯಾನಾ

ಕಲಾಮ್, ಜಯದೇವ ಕವಿಯ ಗೀತಗೋವಿಂದ, ತಿರುಪತಿ ದೇವರ ಅನನ್ಯ ಭಕ್ತ ತಾಳ್ಳಪಾಕಂ, ಅಣ್ಣಮಾಚಾರ್ಯರ ಶೃಂಗಾರಕೀರ್ತನಾಲಿ, ಬ್ರಜಭೂಮಿಯ, ಅಷ್ಟವಾಫ್‌ಕವಿಗಳ ಕೃಷ್ಣ-ಗೋಪೀ ಪ್ರೇಮಕತೆಗಳು, ರಸ್‌ಖಾನ್, ರಹೀಮ್ ಮೊದಲಾದ ೨೧ ಜನ ಮುಸ್ಲಿಂ ಕವಿಗಳ ಕೃಷ್ಣಭಕ್ತಗೀತೆಗಳು ಹಿಂದೂಸ್ಥಾನೀ ಸಂಗೀತ ಪದ್ಧತಿಯ ಅಸಂಖ್ಯಾತ ಧ್ರುವಪದ್(ದ್ರುಪದ್) ಪ್ರಬಂಧಗಳು, ಕರ್ನಾಟಕದ ಶಿವಶರಣ-ಶರಣೆಯರ ಹಲವಾರು ವಚನಗಳು ಕರ್ನಾಟಕದ ಹರಿದಾಸರ ಕೀರ್ತನೆಗಳು, ಅಸ್ಸಾಮಿನ ಶಂಕರದೇವರ, ಬಂಗಾಳದ ವೈಷ್ಣವ್ ಕೀರ್ತನೆಗಳು, ಮಿಥಿಲೆಯ ವಿದ್ಯಾಪತಿ ಪದಾವಲಿ, ಕಾಳಿಯ ಮಹಾತ್ಮೆ, ಕಬೀರ್‌ನ ಗೂಢಭಾಷೆಯ ಕವಿತೆಗಳು. ಸಿಖ್ಖರ ಗ್ರಂಥ್‌ಸಾಹೇಬದಲ್ಲಿ ಅಡಕವಾಗಿರುವ ಹಿಂದಿ ಮತ್ತು ಪಂಜಾಬೀ ಶಬದ್ ಕೀರ್ತನೆಗಳು, ಇವೆಲ್ಲದರಲ್ಲೂ ಪ್ರಿಯ-ಪ್ರೇಯಸಿ ರೂಪಕವನ್ನು ನಾವು ಕಾಣಬಹುದು. ನಾಡಿನ ಆಧ್ಯಾತ್ಮಿಕ, ಸಾಂಸ್ಕೃತಿಕ ಸಾರವನ್ನೇ ಗ್ರಹಿಸಿದ್ದ ರವೀಂದ್ರನಾಥ್ ಠಾಕೂರರು ಈ ಪದ್ಧತಿಯನ್ನೇ ಅನುಸರಿಸಿದ್ದರಲ್ಲಿ ಏನೂ ಆಶ್ಚರ್ಯವಿಲ್ಲ. ಅವರ ಎಷ್ಟೋ ಕವಿತೆಗಳನ್ನು ದೇವರಿಗಾದರೂ ಅನ್ವಯಿಸಬಹುದು ಅಥವಾ ಪ್ರಿಯತಮನಿಗಾದರೂ ಅನ್ವಯಿಸಬಹುದು.

ಅವುಗಳನ್ನು ಅರ್ಥಪೂರ್ಣವಾಗಿ, ರಸವತ್ತಾಗಿ ಹಾಡುವ ಒಂದು ಪದ್ಧತಿಯೇ ಬಂಗಾಳದಲ್ಲಿ ಬೆಳೆದು ಬಂದಿದೆ. ಅದು "ರವೀಂದ್ರ ಸಂಗೀತ್" ಎನ್ನುವ ಒಂದು ಪ್ರಕಾರವೇ ಆಗಿದೆ. ನಾನು ಕಲ್ಕತ್ತೆಯಲ್ಲಿದ್ದಾಗ ಹೆಸರಾಂತ ಕಲಾವಿದರ 'ರವೀಂದ್ರ ಸಂಗೀತ್' ಕಾರ್ಯಕ್ರಮಗಳನ್ನು ಕೇಳಿ, ಅನಂದಿಸಿ, ಧನ್ಯನಾಗಿದ್ದೇನೆ.

***

ಸನ್ಮಾನ್ಯರಿಂದ

ಸತ್ಯಾಗ್ರಹವೆಂಬ ಅಹಿಂಸಾತ್ಮಕ ಹೋರಾಟ ನಡೆಸಿ ಕಷ್ಟಕ್ಕೀಡಾಗಿರುವವರೊಂದಿಗೆ ಸ್ಪಂದಿಸಿದ ಮೇಧಾಪಾಟ್ಕರ್ ರವರ ಬಗ್ಗೆ ಲೇಖನವನ್ನು ಬರೆದು 'ಜನಪದ ವಿಚಾರ'ವು ಜನಪರವೆಂದು ಸಾಬೀತು ಪಡಿಸಿದ್ದೀರಿ, ಅಭಿನಂದನೆಗಳು.

'ಜೀವನ ಕುತೂಹಲ'ದ ಲೇಖಕ ಶ್ರೀ.ಜಿ.ಟಿ.ನಾರಾಯಣರಾಯರ ಆರೋಗ್ಯ ಎರಡು ವರ್ಷಗಳ ಹಿಂದೆ ತೀರಾ ಹದಗೆಟ್ಟು ಬದುಕಿ ಉಳಿದದ್ದು ಒಂದು ಪುನರ್ಜನ್ಮ. ನಮ್ಮ ಪುಣ್ಯ ಅವರ ಬರಹ ಮಾತ್ರ ಸೊರಗಿಲ್ಲ. ಅದೇ ಗಟ್ಟಿ ಅದೇ ಬಿಗಿ ಯಾವುದೇ ವಿಷಯ ಜಿ.ಟಿ.ಎನ್.ರವರ ಲೇಖನಿಯಿಂದ ಸತ್ವಪೂರ್ಣವಾಗುತ್ತದೆಂಬುದಕ್ಕೆ 'ಜೀವನ ಕುತೂಹಲ'ವೇ ಸಾಕ್ಷಿ.

-ಜಿ. ವೈದೇಹಿ, ಮೈಸೂರು

ನಿಂತನೀರಾಗಿರುವ ಸಮಾಜಕ್ಕೊಂದು ಪರಿಹಾರ

–ಎಚ್.ಎಸ್.ದೊರೆಸ್ವಾಮಿ

ಸರ್ವೇಜನೋಸುಖಿನೋಭವಂತು ಎಂದು ಪ್ರತಿದಿನ ಪಠಿಸುತ್ತೇವೆ. ಬರಿಯ ಪಠಣದಿಂದ ಎಲ್ಲರ ಸುಖ ಸಾಧ್ಯವಿಲ್ಲ. ಅದಕ್ಕಾಗಿ ಪ್ರಯತ್ನಬೇಕು.

ಸ್ವಾತಂತ್ರ್ಯಪ್ರಾಪ್ತವಾಗುವವರೆಗೆ ನಮಗೆ ಒಂದು ಗುರಿ ಇತ್ತು. ಗಾಂಧಿಯವರು 'ನನ್ನ ಕನಸಿನ ಭಾರತ' ಎಂಬ ಒಂದು ಘೋಷಣೆಯನ್ನೇ ಮಾಡಿದರು. ರಾಜಕೀಯ ಪಕ್ಷಗಳಿಗೂ ಒಂದು ಗೊತ್ತು ಗುರಿ ಇತ್ತು. ನೆಹರು ಅವರು ಕಾಂಗ್ರೆಸ್‌ಗೆ Socialistic Pattern of Society ಸ್ಥಾಪನೆ ಗುರಿಯೆಂದು ಪ್ರತಿಪಾದಿಸಿದರು. ಜಯಪ್ರಕಾಶ್ ನಾರಾಯಣ್ ಮತ್ತು ಲೋಹಿಯಾ ಸಮತಾವಾದ ಸೋಷಿಯಲಿಸ್ಟ್ ಪಾರ್ಟಿಯ ಸಿದ್ಧಾಂತ ಎಂದರು. ಕಮ್ಯುನಿಸ್ಟರು ದುಡಿಯುವ ಕಾರ್ಮಿಕರ, ಕೃಷಿಕರ ರಾಜ್ಯ ಸ್ಥಾಪನೆ ನಮ್ಮ ಗುರಿ ಎಂದರು.

ಈಗ ಕಾಂಗ್ರಸ್ಸಿಗಾಗಲಿ, ಸೋಷಿಯಲಿಸ್ಟ್ ಪಕ್ಷಕ್ಕಾಗಲಿ, ಕಮ್ಯುನಿಷ್ಟರಿಗೇ ಆಗಲಿ ಒಂದು ನಿಖರವಾದ ಸಿದ್ಧಾಂತ ಇಲ್ಲ. ಶಾಸನಸಭೆ ಮತ್ತು ಪಾರ್ಲಿಮೆಂಟ್‌ಗಳನ್ನು ತಮ್ಮ ವಶಮಾಡಿಕೊಳ್ಳುವುದೇ ಎಲ್ಲ ರಾಜಕೀಯ ಪಕ್ಷಗಳ ಏಕೈಕ ಗುರಿ. ಇದೇ ಎಲ್ಲ ರಾಜಕೀಯ ಪಕ್ಷಗಳ ಸಿದ್ಧಾಂತ. ಈ ಬೆಳವಣಿಗೆಯ ಕಾರಣದಿಂದ ಸರ್ಕಾರ ಜಡವಾಗುತ್ತಿದೆ. ಅಪ್ಪ ಹಾಕಿದ ಅಲದ ಮರಕ್ಕೇ ನೇಣು ಹಾಕಿಕೊಳ್ಳುವ ಪ್ರವೃತ್ತಿ ಎಲ್ಲ ರಾಜಕೀಯ ಪಕ್ಷಗಳಲ್ಲೂ ಬೆಳೆದಿದೆ. ಎಲ್ಲರೂ Statusquioits ಆಗಿದ್ದಾರೆ. ಸಮಾಜ ನಿಂತ ನೀರಾಗಿದೆ. ಅದರಿಂದ ಸಮಾಜಕ್ಕೆ ಒಂದು ರೋಗ ಬಂದಂತಾಗಿದೆ. ಸುಧಾರಣೆ, ಅಭಿವೃದ್ಧಿ ಎಂಬ ಹೆಸರಿನಲ್ಲಿ ಶ್ರೀಮಂತರನ್ನು ಮತ್ತಷ್ಟು ಶ್ರೀಮಂತರನ್ನು ಮಡುವ, ಬಡವರನ್ನು ಕಡುಬಡವರನ್ನಾಗಿ ಮಾರ್ಪಡಿಸುವ ಯೋಜನೆಗಳು ಜಾರಿಗೆ ಬಂದಿವೆ. ಎಲ್ಲ ಬಗೆಯ ಭೇದಗಳೂ ಸಮಾಜದಲ್ಲಿ ಉಂಟಾಗಿದೆ. ಬಡವ–ಬಲ್ಲಿದ, ದುಡಿಯುವವ–ದುಡಿಸಿಕೊಳ್ಳುವವ, ಆಜಾತಿ–ಈಜಾತಿ, ಶೋಷಕ–ಶೋಷಿತ, ವಿದ್ಯಾವಂತ–ಅನಕ್ಷರಸ್ತ ಮುಂತಾದ ನೂರಾರು ಭೇದಾಸುರರನ್ನು ಸಮಾಜದಲ್ಲಿ ಹುಟ್ಟಿಕ್ಕಲಾಗಿದೆ. ಇದನ್ನೇ ಪ್ರಗತಿ ಎಂದು ಭಾವಿಸುವ ಮೂರ್ಖತನವನ್ನು ಯೋಜನಾಮಂಡಲಿಯವರು, ಸರ್ಕಾರ ನಡೆಸುವವರು, ಪಾರ್ಲಿಮೆಂಟ್ ಸದಸ್ಯರು, ಶಾಸಕರು, ನೌಕರಷಾಹಿ ಎಲ್ಲರೂ ಮೆರೆಸುತ್ತಿದ್ದಾರೆ. ಅಮೆರಿಕ ಭಾರತವನ್ನು ಬಂಡವಾಳಷಾಹಿ ರಾಷ್ಟ್ರವನ್ನಾಗಿ ಪರಿವರ್ತಿಸಲು ಭಾರತ ಸರ್ಕಾರದ ಮೇಲೆ ಒತ್ತಡ ಹಾಕುತ್ತಿದೆ. ಇದರಿಂದ ಸಮಾಜದಲ್ಲಿ ಆರ್ಥಿಕ ಕಂದರ ಹೆಚ್ಚುತ್ತಾ ಹೋಗುತ್ತದೆ.

ಜನ ಜಡವಾಗಿದ್ದಾರೆ. ಬುದ್ಧಿ ಜೀವಿಗಳು, ಸಾಮಾಜಿಕ ಸಂಸ್ಥೆಗಳನ್ನು

ನಡೆಸುತ್ತಿರುವ ಸಹಸ್ರಾರು ಕಾರ್ಯಕರ್ತರು, ಅವರ ಧಣಿಗಳು ಸಮಾಜ ಪರಿವರ್ತನೆಯ ಕನಸನ್ನೂ ಕೂಡ ಕಾಣುತ್ತಿಲ್ಲ.

ಬಡವರು, ದಲಿತರು, ಶೋಷಣೆಗೊಳಗಾದವರು, ಎಷ್ಟು ಕಾಲ ಈ ದುಸ್ಥಿತಿಯಲ್ಲಿ ಉಳಿಯಬೇಕು?

ಸರ್ಕಾರ ನಡೆಸುವವರು ತಮ್ಮ ಜಡತೆಯನ್ನು ಕೊಡವಿಕೊಳ್ಳಬೇಕು. ಸರ್ವರಿಗೂ ಸ್ವರಾಜ್ಯದ ಫಲ ದೊರೆಯುವಂತೆ ಮಾಡಲು ನಾವೇನು ಕ್ರಮ ಕೈಗೊಳ್ಳಬೇಕು? ಎಂಬುದನ್ನು ಕುರಿತು ಚಿಂತಿಸಬೇಕು. ಸಮಾಜ ಸೇವಾ ಸಂಸ್ಥೆಗಳೂ ಈ ಗುರಿ ಸಾಧನೆಗಾಗಿ ಕಾರ್ಯಕ್ರಮ ಹಾಕಿಕೊಳ್ಳಬೇಕು.

ಮೊದಲು ನಾವು ಸಾಮಾಜಿಕ ಅಸಮಾನತೆಯನ್ನು ತೊಲಗಿಸಲು ಯೋಜನೆ ಸಿದ್ಧಗೊಳಿಸೋಣ.

ನಮ್ಮ ಸಮಾಜವನ್ನು ಒಂದು ಸಭ್ಯ ಸಮಾಜವೆಂದು ಕರೆಯಲೂ ಸಾಧ್ಯವಿಲ್ಲ. ಜಯಪ್ರಕಾಶರು ಹೇಳುವಂತೆ ನಮ್ಮ ಸಮಾಜ ಒಂದು 'Human Jungle'ಕಾಡಿನಲ್ಲಿರುವಂತೆ ನಮ್ಮ ಸಮಾಜದಲ್ಲಿ ಇರುವವರು ಕಾಡು ಪ್ರಾಣಿಗಳು ಹುಲಿ ಹುಲ್ಲೆಯನ್ನು ತಿನ್ನುವಂತೆ ಸಮಾಜದಲ್ಲಿ ದುರ್ಬಲರಿಗೆ ನೆಮ್ಮದಿಯೆ ಇಲ್ಲ. ಒಬ್ಬರ ಹಿತ ಮತ್ತೊಬ್ಬರ ಹಿತಕ್ಕೆ ವಿರುದ್ಧ. ಸಮಾಜ ಜೇಡಿಮಣ್ಣಿನಂತೆ ಇರಬೇಕು. ಒಂದು ಕಣ ಇನ್ನೊಂದು ಕಣಕ್ಕೆ ಗಟ್ಟಿಯಾಗಿ ಅಂಟಿಕೊಂಡಿರುವುದು ಜೇಡಿಮಣ್ಣಿನ ಗುಣ. ಕಣಕಣವೂ ಪ್ರತ್ಯೇಕತೆಯನ್ನು ಸಾಧಿಸುವುದು ಮರಳಿನ ಗುಣ. ನಮ್ಮ ಸಮಾಜ ಜೇಡಿಮಣ್ಣಾಗಬೇಕು. ಮರಳು ದಿಬ್ಬವಾಗಿ ಉಳಿಯಬಾರದು. ನಮ್ಮಲ್ಲಿ ಎಲ್ಲ ಬಗೆಯ ಭೇದ ಇರುವುದರಿಂದ ಸಮಾಜ ಮರಳು ದಿಬ್ಬದಂತಿದೆ. ಒಂದು ಗಾಳಿ ಬೀಸಿದರೆ ಕಣಕಣವೂ ಬೇರೆಯಾಗಿ ಹೋಗುತ್ತದೆ. ಸಮಾಜ ಮಾನವ ಸಮಾಜ ಎನಿಸಬೇಕಾದರೆ ನಮ್ಮಲ್ಲಿ ಬೇರು ಬಿಟ್ಟಿರುವ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಭೇದಗಳೆಲ್ಲ ತೊಲಗಬೇಕು. ನಮ್ಮೆಲ್ಲರ ಗುರಿ ಸರ್ವೋದಯ ಸಮಾಜದ ನಿರ್ಮಾಣವಾಗಬೇಕು. ನಮ್ಮಲ್ಲಿ ಮನೆಮಾಡಿರುವ ಸಾಮಾಜಿಕ ಅಸಮಾನತೆಯನ್ನು ನೀಗಲು ಸರ್ಕಾರ ಮತ್ತು ಸಮಾಜ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕು. ಹರಿಜನರ ಸಮಸ್ಯೆಯನ್ನು ಕೈಗೆತ್ತಿಕೊಳ್ಳೋಣ. ಹರಿಜನರ ಹಕ್ಕು ಭಾದ್ಯತೆಯ ಬಗೆಗೆ ಒಂದು ಕಾನೂನನ್ನು ಸರ್ಕಾರ ಮಾಡಿದೆ. ಆ ಕಾನೂನು ರೀತ್ಯಾ ಹರಿಜನರನ್ನು ದೇವಾಲಯಗಳಿಗೆ ಎಲ್ಲರೂ ಬರಮಾಡಿಕೊಳ್ಳುವುದಾಗಬೇಕು. ಸವರ್ಣರ ಸ್ವಾಮ್ಯದಲ್ಲಿರುವ ಸಾರ್ವಜನಿಕ ಬಾವಿ, ಕೊಳ, ಕೊಳಾಯಿ ಇವುಗಳಿಂದ ನೀರನ್ನು ಮೊಗೆಯುವ, ನೀರನ್ನು ಬಳಸುವ ಅಧಿಕಾರವನ್ನು ಹರಿಜನರು ಹೊಂದಿರುತ್ತಾರೆ. ಆದರೆ ವಸ್ತುಸ್ಥಿತಿ ಏನು? ಪೋಲಿಸ್ ರಕ್ಷಣೆಯಿಲ್ಲದೆ ಹರಿಜನರು ಯಾವ ಸಾರ್ವಜನಿಕ ಬಾವಿಯಲ್ಲಿ ನೀರು ಸೇದಿಕೊಳ್ಳಲು ಸಾಧ್ಯ? ಯಾವ ದೇವಾಲಯಕ್ಕೆ ದೇವರ ದರ್ಶನಕ್ಕೆ ಹೋಗಲು ಸಾಧ್ಯ? ಈ ಕಾನೂನು

ಸಾರ್ಥಕವಾಗಬೇಕಾದರೆ ಜನತೆಯಲ್ಲಿ ಅರಿವು ಮೂಡಬೇಕು. ದಲಿತರನ್ನು ಹರಿಜನರನ್ನು ನಮ್ಮ ಸಮಾಜ, ನಮ್ಮ ಸೋದರರರೆಂದು ಭಾವಿಸುವುದಾಗಬೇಕು. ಗೀತೆಯಲ್ಲಿ ಆತ್ಮಾಸಮ್ಯದ ಮಾತು ಬಂದಿದೆ. ಎಲ್ಲರಿಗೂ ದೇವರಿದ್ದಾನೆ. ಎಲ್ಲರಿಗೂ ಆತ್ಮ ಇದೆ. ಹಾಗಿದ್ದೂ ನಾವು ಭೇದ-ಭಾವ ಬೆಳೆಸಿಕೊಳ್ಳುವುದು ಸರಿಯೆ? ಎಂದು ಪ್ರತಿಯೊಬ್ಬ ಹಿಂದೂವೂ ಯೋಚಿಸಬೇಕು. ನಾವೆಲ್ಲ ಒಂದು. ವ್ಯಕ್ತಿ ವ್ಯಕ್ತಿಯಲ್ಲಿ ಭೇದ ಮಾಡಬಾರದು ಎಂಬ ತಿಳುವಳಿಕೆಯನ್ನು ಜನತೆಯಲ್ಲಿ ಮೂಡಿಸಲು ಸಮಾಜ ಸುಧಾರಕರು, ಮಠಗಳು, ಸಮಾಜ ಸೇವಕ ಸಂಸ್ಥೆಗಳು ಹಳ್ಳಿಹಳ್ಳಿಯಲ್ಲೂ ಪ್ರಚಾರ ಕಾರ್ಯಕೈಗೊಳ್ಳಬೇಕು. ಜನರ ಮನಸ್ಸಿನಿಂದ ಈ ಭೇದಾಸುರರನ್ನು ತೆಗೆದುಹಾಕಲು ಸತತ ಪ್ರಯತ್ನ ನಡೆಯಬೇಕು.

ಈ ಅನೇಕ ವಿದ್ಯಾವಂತ ಯುವಕರು ಹಳ್ಳಿಗಳಲ್ಲಿದ್ದಾರೆ. ಅವರಿಗೆ ಈ ಶಿಕ್ಷಣ ನೀಡಬೇಕು. ಹಳ್ಳಿಯ ಯುವಕರು ಸಂಘಟಿತರಾಗಿ ಈ ಕಾರ್ಯವನ್ನು ಹಮ್ಮಿಕೊಳ್ಳಲು ಪ್ರೇರಣೆ ನೀಡಬೇಕು ಇದೆಲ್ಲ ಕೆಲಸ ಒಂದು ಕಾಲಮಿತಿಯೊಳಗೆ ಕೈಗೂಡಬೇಕು.

ಹರಿಜನರು-ಗಿರಿಜನರು ಶೋಷಿತರು, ಬಡವರು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಯೋಜನೆಗಳನ್ನು ರೂಪಿಸಬೇಕು. ಇದು ಹಕ್ಕೋತ್ತಾಯದ ಪ್ರಶ್ನೆಯಾಗಬೇಕು. ಬಡವರು, ಶೋಷಿತರು, ಹರಿಜನರು ಆರ್ಥಿಕಾಭಿವೃದ್ಧಿ ಹೊಂದಿದರೆ ಅವರು ಸಾಮಾಜಿಕವಾಗಿಯೂ ಮೇಲೇರುವರೆಂಬುದರಲ್ಲಿ ಎರಡು ಮಾತಿಲ್ಲ.

***

ಪುಸ್ತಕ ವಿಚಾರ

ಶ್ರೀ ಎಂ.ಎಸ್. ವೆಂಕಟರಾಮಯ್ಯನವರು ಆಗಾಗ್ಗೆ ರಾಷ್ಟ್ರಮಟ್ಟದಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಕವನ ಸ್ಪರ್ಧೆಯನ್ನು ಏರ್ಪಡಿಸುತ್ತಾರೆ. ಈ ಸ್ಪರ್ಧೆಯಲ್ಲಿ ಪ್ರಾಥಮಿಕ ವಿಭಾಗದಿಂದ ಪದವಿ ವಿಭಾಗದವರೆಗಿನ ವಿದ್ಯಾರ್ಥಿಗಳು ಭಾಗವಹಿಸುತ್ತಾರೆ. ಸ್ಪರ್ಧೆಯಲ್ಲಿ ಆಯ್ಕೆಗೊಂಡ ಕವನಗಳನ್ನು ಸಂಗ್ರಹಿಸಿ "BIZZ BUZZ"ಎಂಬ ಹೆಸರಿನಲ್ಲಿ ಪ್ರಕಟಿಸುತ್ತಾರೆ. ಅವರು ಇತ್ತೀಚಿನ ಸಂಕಲನವೊಂದನ್ನು ಜನಪದ ವಿಚಾರಕ್ಕೆ ಕಳುಹಿಸಿದ್ದಾರೆ. ಅದನ್ನು ಪ್ರೀತಿಯಿಂದ ಸ್ವೀಕರಿಸಲಾಗಿದೆ. ಈ ಪುಸ್ತಕದ ಬಗ್ಗೆ ಆಸಕ್ತಿವುಳ್ಳವರು ಎಂ.ಎಸ್.ವೆಂಕಟರಾಮಯ್ಯ. ನಂ.-2 ಒಂದನೇ ಕ್ರಾಸ್, ಕಾಳಿದಾಸ ಲೇ ಔಟ್, ಶ್ರೀನಗರ ಬೆಂಗಳೂರು-560050.

ದೂರವಾಣಿ ಸಂಖ್ಯೆ-080, 26755657ನ್ನು ಸಂಪರ್ಕಿಸಬಹುದು.

ಪೂರ್ವಜರ ಪರಿಸರ ಪ್ರಜ್ಞೆ

ಡಾ॥ ಎಚ್.ರಾಮಚಂದ್ರಸ್ವಾಮಿ

ವೇದಗಳಲ್ಲಿ ನಿರೂಪಿತವಾಗಿರುವ ದೈವಪ್ರಜ್ಞೆಯ ಬಗ್ಗೆ ಪರತತ್ತ್ವ ಮೀಮಾಂಸೆಯ ಬಗ್ಗೆ ಪಂಡಿತರಲ್ಲಿ ಅಭಿಪ್ರಾಯಭೇದವಿರಬಹುದು. ಆದರೆ ಋಗ್ವೇದದ ಋಷಿಗಳ ಪರಿಸರ ಪ್ರಜ್ಞೆಯ ಬಗ್ಗೆ ಎರಡನೆಯ ಮಾತೇ ಇಲ್ಲ. ಪರಿಸರವನ್ನು ಕಂಡು ಅವರ ಹಾಗೆ ಆಸ್ವಾದಿಸುವ, ಆನಂದಪಡುವ ಯೋಗ್ಯತೆ ಪರಿಸರ ಸಂರಕ್ಷಣೆಯೆಂದು ಬೊಬ್ಬಿರಿಯುವ ನಮಗಂತೂ ಇಲ್ಲ. ದೈವಿಕತೆ ಎನ್ನುವುದು ಪಾಶವೀಯತೆಯನ್ನು ಬಿಟ್ಟು ಸುಸಂಸ್ಕೃತನಾಗಿ ಮಾನವೀಯತೆಯ ಹಂತಕ್ಕೇರಿದ ಮಾನವನ ಇನ್ನೂ ಮುಂದುವರೆದ ಉತ್ಕೃಷ್ಟ ಭಾವನೆ; ಬದುಕಿನ ಬಗೆಗಿನ ಅನನ್ಯವಾದ ಪ್ರೀತಿ ಹಾಗೂ ಶ್ರದ್ಧೆಗಳು ದೈವಿಕತೆಯ ದ್ಯೋತಕವಾಗಿವೆ. ಭೀತಿರಹಿತ ಆನಂದವು ಅದರ ಇನ್ನೊಂದು ಲಕ್ಷಣ. ಋಗ್ವೇದವು ಈ ಆರೋಹಣವನ್ನು ಸ್ಪಷ್ಟವಾಗಿ ಚಿತ್ರಿಸುತ್ತದೆ; ದೈವಿಕತೆಯ ಸಂಪ್ರಾಪ್ತಿಯ ಸ್ವರ್ಗೀಯ ಸನ್ನಿವೇಶವನ್ನು ಉಚ್ಚ ಕಂಠದಿಂದ ಹಾಡಿ ದಾಖಲಿಸುತ್ತದೆ.

ಮನುಷ್ಯನ ಭಾವವಿಕಾಸಕ್ಕೂ ಪ್ರಕೃತಿಗೂ ಅವಿನಾಸಂಬಂಧ ಇದೆ. ಪ್ರಕೃತಿಯನ್ನು ವರ್ಣಿಸದ ಕವಿ ಯಾರಿದ್ದಾರೆ? ಲೋಕದಲ್ಲಿ ಬದುಕು ನಿರಾಶಾದಾಯಕ, ಅರ್ಥರಹಿತ, ಅಸಂಗತ ಎಂದು ಪ್ರತಿಪಾದಿಸುವ ತತ್ತ್ವದರ್ಶನಗಳೂ ಇಲ್ಲದಿಲ್ಲ. ಆದರೆ ಮನುಷ್ಯನ ಅಂತಸ್ಸತ್ವ ವಿಕಾಸಗೊಂಡು ಹೊರಬರಬೇಕಾದರೆ ಆಶಾವಾದದ ಮೂಲಕವೇ ಹೊರತು ನಿರಾಶಾವಾದದ ಮೂಲಕ ಅಲ್ಲ. ಇಂತಹ ಆಶಾವಾದ ಋಗ್ವೇದದಲ್ಲಿ ಧಾರಾಳವಾಗಿದೆ. ಮಾನವನ ಬದುಕಿನ ಸಂತೋಷವು ಪ್ರಕೃತಿಮಾತೆಯ ಪಾದಗಳನ್ನೇ ಆಶ್ರಯಿಸಿಕೊಂಡಿದೆ ಎಂಬುದನ್ನು ಋಗ್ವೇದದ ಋಷಿಗಳು ಅರ್ಥಮಾಡಿಕೊಂಡಿದ್ದರು. ಆಶಾವಾದದ ಮೂಲಭೂತ ಸೆಲೆಯೇ ಪ್ರಕೃತಿಯನ್ನು ಕೆಡಿಸುವುದಕ್ಕೆ ಹೋಗಿದೆ, ಅದರ ಒಂದು ಭಾಗವಾಗಿ ಬದುಕುವುದರಲ್ಲಿದೆ ಎಂಬುದು ಅವರಿಗೆ ತಿಳಿದಿತ್ತು. ಈ ಸತ್ಯವನ್ನು ಅಷ್ಟು ಹಿಂದೆಯೇ ಅರಿತುಕೊಂಡಿದ್ದ ಬೇರಾವ ಸಂಸ್ಕೃತಿಯೂ ಜಗತ್ತಿನ ಇತಿಹಾಸದಲ್ಲಿ ಕಾಣಸಿಗದು.

ಪ್ರಪಂಚದ ಸಂಸ್ಕೃತಿ–ನಾಗರಿಕತೆಗಳು ರೂಪುತಾಳಿದ್ದು ಮಹಾನದಿಗಳ ಬಯಲುಗಳಲ್ಲಿ ಎಂಬುದು ನಮಗೆ ತಿಳಿದೇ ಇದೆ. ಸ್ವಾಭಾವಿಕವಾಗಿ ನಾವು ಹಂಬಲಿಸುವ ಮನಶ್ಶಾಂತಿ ನಮಗೆ ಸಿಕ್ಕಬೇಕಾದರೆ ಪ್ರಕೃತಿಯ ಸನ್ನಿಧಿಯಲ್ಲೇ ಹೊರತು ಕಾಂಕ್ರಿಟ್ ಕಾಡುಗಳಲ್ಲಿ ಅಲ್ಲ. ಋಗ್ವೇದದಲ್ಲಿನ ಒಂದೊಂದು ಪ್ರಕೃತಿ ವರ್ಣನೆಯನ್ನು ಓದಿ ಅರ್ಥಮಾಡಿಕೊಂಡರೂ ನಮ್ಮ ಮನಸ್ಸು ಸಂತೋಷದಿಂದ,

ಶಾಂತಿಯಿಂದ ತುಂಬಿ ತುಳುಕುತ್ತದೆ:

ಸೂರ್ಯಕಿರಣವು ಹಾದಿ ತೋರಿದ ಹಾಗೆ ಹರಿಯುವ ನದಿಗಳೇ
ಇಂದ್ರವಜ್ರವು ಸೀಳಿ ಸುರಿಸಿದ ನೀರು ತುಂಬಿದ ನದಿಗಳೇ
ಅನವರತ ನಮಗೊಳಿತು ಮಾಡಿರಿ, ನಮ್ಮ ಬದುಕನು ತುಂಬಿರಿ.
(ಋಗ್ವೇದ ಮಂಡಲ೭, ಸೂಕ್ತ ೪೭, ಶ್ಲೋಕ ೪)

ಅವತರಿಸಿ ಆಕಾಶದಿಂ ಸುರಿದು ಹರಿಯುವ ಜಲಗಳೇ
ನದಿಗಳಿಂದುಕ್ಕುಕ್ಕಿ ಸಾಗರ ಸೇರಲಿರುವಾ ಜಲಗಳೇ
ಸ್ವಯಮುದ್ಭವಿಸಿ ಉಕ್ಕುವ ಊಟೆಯೇ, ಕಾಲುವೆಯ ಜಲಗಳೇ
ನಿರ್ಮಲ ಅಪೋದೇವಿಯರು ನೀವೆಮ್ಮ ಹರಸಿರಿ, ಕಾಪಿಡಿ
(ಋ. ೭ ೪೯, ೨)

ತಗ್ಗಿನೆಡೆ ಧಾವಿಸುವ ನದಿಗಳು, ಎತ್ತರದಿ ಹರಿವ ನದಿಗಳು
ಉದಕದಿಂ ತುಂಬಿರುವ ನದಿಗಳು,
ರೋಗ, ಹಿಂಸೆಗಳಂ ನೀಡದೆ
ಜಲಸಮೃದ್ಧಿಯಿಂ ಕಲ್ಯಾಣವಂ ನಿರ್ಮಲತೆಯಿಂ ತಾವು ನೀಡಿ,
(ಋ. ೭. ೫೦. ೪)

ಸ್ವರ್ಗಕಾಂತಿಯ ಪರ್ಜನ್ಯದೇವಗೆ ಹೇಳುವೆವು ಈ ಮಾತನು
ನಮ್ಮ ಈ ಸ್ತುತಿ ಅವನ ಹೃದಯವ ತಟ್ಟಿ ಉಕ್ಕಲಿ, ಕರುಣೆಯು
ಕಾಲಕಾಲಕ್ಕೆ ವೃಷ್ಟಿಯಾಗಲಿ, ಸುಫಲವೃಕ್ಷಗಳೆಲ್ಲೆಡೆ ಹಚ್ಚ ಹಸಿರಿಂ
ನಲಿಯಲಿ. (ಋ. ೭. ೧೦೧. ೫)

ರಾಜಿಸುವ ಪೃಥಿವಿಯೆ, ಗುಣಶಾಲಿ ಸಲಹುವ ತಾಯಿಯೆ,
ಧರಿಸಿರುವೆ ಬೆಟ್ಟಗಳನು ನೀ ಜೀವಿಗಳು ಬದುಕಲೆಂದು.
(ಋ. ೫.೮೫. ೧)

ಬೆಳಗುತಿಹ ಹೇ ಸೂರ್ಯಜ್ಯೋತಿಯೆ
ನಿನ್ನ ನೋಡುತ ಬಾಳ್ವೆವು
ದೀರ್ಘದರುಶನ ಅನವರತ ಕರುಣಿಸು ಅನುದಿನವು
ಮೂಡುವ ಮಿತ್ರನೇ
ಪ್ರೇಮಮಯರೂ, ನಿಷ್ಕಳಂಕರೂ ರೋಗರಹಿತರೂ ಪ್ರಜಾವಂತರೂ
ಆಗಿ ಬಾಳುವಂತೆಮಗೆ ದೀರ್ಘಾಯುವನು
ನೀಡು ಹೇ ಸೂರ್ಯದೇವ
(ಋ. ೧೦. ೩೩. ೭)

ಸರಸತಿಯ ಜಲಧಾರೆ ಶುಭ್ರವು
ಇಕ್ಕೆಲದಿ ವಾಸಿಸುವ ಜನರಿಗೆ

ಅನ್ನದಾಯಿನಿ ರಕ್ಷಕಿಯೆ ನೀ
ಮಹಿಮಾನ್ವಿತೆ ನದಿಯೆ ಕಾಪಿಡು ಎಮ್ಮನೂ
ಅಮಿತ ಧನಸಮೃದ್ಧಿಯಿತ್ತು ರಕ್ಷಿಸು
ಮರುತ್ತುಗಳ ಒಡನಾಡಿಯೆ

(ಋ. ೩. ೯೬. ೨)

ಕುಡಿಸಿರೆಮಗೆ ನೀವ್ ಮಧುರಜೀವನ ರಸವ ದ್ಯಾವಾ ಪೃಥ್ವಿಗಳೆ
ಮಧುರ ಜಲಧಾರೆ ಹರಿಸುವ ದೇವಿಯರೆ
ಮಧುವ್ರತೆಯರೆ ನೀವೆಮ್ಮ ಹರಸಿರಿ
ಧನ–ಯಜ್ಞ–ದೇವತ್ವ ಧರಿಸುವ ನೀವ್‌ಗಳು
ಕರುಣಿಸಿರೆಮಗೆ ಅನ್ನ–ಬಲ–ವೀರ್ಯಗಳನು.

(ಋ. ೬. ೭೦. ೫)

ಹೇ ನಿರ್ಮಲಾನಿಲನೆ ಹೃದಯದಲಿ ಚೇತನವ ಮೂಡಿಸುವ
ನಿರೋಗ ಸುಖೌಷಧಿಗಳನಿತ್ತೆಮ್ಮ ಆಯುವರ್ಧನೆ ಮಾಡು

(ಋ.೧೦. ೧೮೬. ೧)

ಪರಮಪದದಲ್ಲಿ ನಿನ್ನ ಅಮೃತದ ನಿಕ್ಷೇಪ
ಹೇ ನಿರ್ಮಲಾನೀಲನೆ ಕೊಡು ನಮಗೆ ಅಮೃತತ್ವ

(ಋ. ೧೦. ೧೮೬. ೩)

ಹೀಗೆ ಋಗ್ವೇದದ ಋಷಿಗಳಿಗೆ ಪಂಚಭೂತಗಳಿಂದ ಉಂಟಾದ ಕಾಡು ನದಿ ಪರ್ವತ ನೆಲ ಆಕಾಶ ಗಾಳಿ ನೀರು ಎಲ್ಲವೂ ಮನುಷ್ಯನ ಬದುಕಿನ ಮೇಲೆ ತಮ್ಮ ಚಿರಂತನ ಪ್ರಭಾವವನ್ನು ಉಂಟುಮಾಡುತ್ತಿರುತ್ತವೆ ಎಂಬುದು ಗೊತ್ತಿತ್ತು. ಈ ಎಲ್ಲ ಪ್ರಕೃತಿಸಹಜ ಉಪಾದಾನಗಳ ಸಂಯೋಜಿತ ಸಂಯುಕ್ತ ಸತ್ವವೇ ಪರಿಸರ. ನಾವಿಂದು ಋಗ್ವೇದದ ಋಷಿಗಳಂತೆ ಇವೆಲ್ಲವನ್ನೂ ಒಟ್ಟಾಗಿ ಪರಿಗಣಿಸಿ ಯೋಚಿಸಲಾರದ ಸ್ಥಿತಿಯಲ್ಲಿದ್ದೇವೆ.

ಜೀವಿಪರಿಸ್ಥಿತಿ ಎಂದರೇನೇ ಒಂದು ಜೀವಿಯು ತನ್ನ ಸುತ್ತಣ ಒಟ್ಟು ಪರಿಸರದ ಯಾವ ಪ್ರಭಾವಗಳಿಗೆ ಏಕಕಾಲದಲಿ ಒಳಗಾಗಿರುತ್ತದೆ ಎಂಬುದರ ಮೊತ್ತ. ನಾವು ಈ ಪ್ರಭಾವಗಳನ್ನೆಲ್ಲಾ ಒಂದೊಂದಾಗಿ ವಿಶ್ಲೇಷಿಸಿ ಅಭ್ಯಾಸ ಮಾಡಬಲ್ಲವೇ ಹೊರತು ಅವುಗಳ ಮೊತ್ತವಾದ ಸಂಯುಕ್ತ ಪ್ರಭಾವವನ್ನು ವೇದಕಾಲದ ಋಷಿಗಳಿಗೆ ಇತ್ತು ಎಂಬುದೇ ಅವರ ಹಿರಿಮೆಯಾಗಿದೆ.

– ಸಾಭಾರ (ವಿವೇಕ ಪ್ರಭ)

***

ಭಾರತೀಯ ಸರ್ಕಸ್‌ನ ಮೂಲ ಪುರುಷ ಕನ್ನಡಿಗ

–ದ.ರಾ. ಪುರೋಹಿತ

ಇದು ೧೮೮೨ರಲ್ಲಿ ನಡೆದ ಘಟನೆ.

ಮುಂಬಯಿಯ ಇಂದಿನ ಆಜಾದ್ ಮೈದಾನದಲ್ಲಿ ಇಂಗ್ಲೆಂಡ್‌ನ ಪ್ರಖ್ಯಾತ 'ವಿಲ್ಸನ್ ಸರ್ಕಸ್' ಬೀಡು ಬಿಟ್ಟಿತ್ತು. ಪಳಗಿದ ಕುದುರೆಗಳ ಆಟ ಈ ಸರ್ಕಸ್‌ನ ಹೆಗ್ಗಳಿಕೆ. ಅದೊಂದು ದಿನ ಸರ್ಕಸ್‌ನ ಒಡೆಯ ವಿಲ್ಸನ್ ಪ್ರೇಕ್ಷಕರನ್ನು ಉದ್ದೇಶಿಸಿ ' ಕುದುರೆಗಳನ್ನು ಪಳಗಿಸಿ, ಆಡಿಸುವುದು ಕಠಿಣ ಕೆಲಸ. ಭಾರತೀಯರಿಗೆ ಇದು ಸಾಧ್ಯವಿಲ್ಲ' ಎಂದುಬಿಟ್ಟ.

ಆಗ ಪ್ರೇಕ್ಷಕರ ನಡುವೆ ಎದ್ದು ನಿಂತು 'ನಾನು ಇದನ್ನು ಒಂದು ವರ್ಷದಲ್ಲಿ ಸಾಧಿಸಿತೋರಿಸುತ್ತೇನೆ' ಎಂದು ಸವಾಲುಸ್ವೀಕರಿಸಿದವರು ವಿಷ್ಣುಪಂತ ಮೋರೇಶ್ವರ ಛತ್ರೆ, ಮುಂದೆ ಮೂರ್‍ನಾಲ್ಕು ತಿಂಗಳಲ್ಲಿಯೇ ಛತ್ರೆ ಸರ್ಕಸ್ ಪ್ರಾರಂಬಿಸಿಯೇ ಬಿಟ್ಟರು. ಆ ಮೂಲಕ ೧೮೮೨ರ ನವಂಬರ್‌ನಲ್ಲಿ 'ನ್ಯೂ ಇಂಡಿಯನ್ ಸರ್ಕಸ್' ಎಂಬ ಭಾರತದ ಮೊಟ್ಟ ಮೊದಲ ಸರ್ಕಸ್ ಕಂಪನಿ ಅಸ್ತಿತ್ವಕ್ಕೆ ಬಂತು.

ವಿಲ್ಸನ್ ಸರ್ಕಸ್‌ಗೆ ವಿಭಿನ್ನವಾಗಿ ಪ್ರಾರಂಭವಾದ 'ನ್ಯೂ ಇಂಡಿಯನ್ ಸರ್ಕಸ್' ಜನರನ್ನು ಸೆಳೆಯುವಲ್ಲಿ ಯಶಸ್ವಿಯಾಯಿತು. ಮುಂಬಯಿಯ ಆಜಾದ್ ಮೈದಾನದಲ್ಲಿ ಭಾರತೀಯನೊಬ್ಬ ನಡೆಸುತ್ತಿದ್ದ ಸರ್ಕಸ್‌ನತ್ತ ಜನರ ಸಾಗರವೇ ಹರಿದು ಬಂತು. ಅದೊಂದು ದಿನ 'ವಿಲ್ಸನ್ ಸರ್ಕಸ್'' ಮುಂಬಯಿಗೆ ಮತ್ತೆ ಬಂತು. ಒಂದುವರ್ಷದ ಹಿಂದೆ ಮುಗಿಬಿಳುತ್ತಿದ್ದ ಜನ ಅತ್ತಸೆಳೆಯಲಲ್ಲ 'ವಿಲ್ಸನ್ ಕಂಪನಿ ಪ್ರೇಕ್ಷಕರಿಲ್ಲದೆ ತತ್ತರಿಸಿತು. ಕೊನೆಗೊಂದು ದಿನ ವಿಲ್ಸನ್‌ನ ಕುದುರೆಗಳನ್ನು, ಕಲಾವಿದರನ್ನು, ಸಾಮಾನುಗಳನ್ನು ವಿಷ್ಣು ಪಂತರೆ ಖರೀದಿಸಿ, ಆತನಿಗೆ ಇಂಗ್ಲೆಂಡಿಗೆ ತೆರಳಲು ಹಡಗಿನ ಟಿಕೆಟ್ಟನ್ನು ತೆಗೆಸಿಕೊಟ್ಟರು!

ಹೀಗೆ ನೂರು ವರ್ಷಗಳ ಹಿಂದೆ ಅಚ್ಚ ಭಾರತೀಯ ಸರ್ಕಸ್‌ಗೆ ಜನ್ಮ ಕೊಟ್ಟ ಸಾಹಸಿ ವಿಷ್ಣುಪಂತ ಛತ್ರೆ ಕರ್ನಾಟಕದವರು. ಬಿಜಾಪುರ ಜಿಲ್ಲೆಯ ತಿಕೋಟಾದವರು ಎಂಬುದು ಗಮನೀಯ.

ಭಾರತೀಯ ಸರ್ಕಸ್ ಪರಂಪರೆಯ ದಿಗ್ಗಜ ವಿಷ್ಣುಪಂತ ಛತ್ರೆ ಅವರ ತಂದೆ ಮೋರೋ ಪಂತರು ಕ್ರಿ.ಶ.೧೮೪೦ರ ಸುಮಾರಿಗೆ ಜಮಖಂಡಿಯ ಸಂಸ್ಥಾನಿಕರಾಗಿದ್ದ ಪಟವರ್ಧನರ ಸೇನೆಯಲ್ಲಿ ಅಧಿಕಾರಿಯಾಗಿದ್ದರು. ನಿಷ್ಣಾತ ಅಶ್ವಾರೋಹಿಯಾಗಿದ್ದ ಮೋರೋ ಪಂತರ ಎರಡನೆ ಮಗ ವಿಷ್ಣುಪಂತರಿಗೆ

ಬಾಲ್ಯದಲ್ಲೇ ಪ್ರಾಣಿಗಳ ಮೇಲೆ ಅಪಾರ ಪ್ರೇಮ, ಸಂಗೀತದತ್ತ ಹೆಚ್ಚಿನ ಆಸಕ್ತಿ. ವಿಷ್ಣುಪಂತರು ತಮ್ಮ ಹದಿನೈದನೆಯ ವಯಸ್ಸಿನಲ್ಲಿಯೇ ಗ್ವಾಲಿಯರ್‌ಗೆ ಹೋಗಿ ಅಲ್ಲಿನ ಅಶ್ವ ವಿದ್ಯಾ ಸಾಹಸಿ ಅಪಟೆ ಎಂಬುವವರ ಬಳಿ ಅಶ್ವಗಳನ್ನು ಪಳಗಿಸುವ ಕಲೆಯನ್ನು ಕರಗತ ಮಡಿಕೊಂಡರು. ಗ್ವಾಲಿಯರ್‌ನಲ್ಲಿನ ಶಿಂಧೆ ಸರಕಾರದ ದರ್ಬಾರಿನ ಗಾಯಕರಾದ ಸಂಗೀತ ದಿಗ್ಗಜರಾದ ಹದ್ದುಖಾನ್ ಮತ್ತು ಹಾಸೀಂಖಾನ್‌ರ ಒರತಿಯನ್ನು ಗಳಿಸಿದ ವಿಷ್ಣುಪಂತರು ೧೨ ವರ್ಷಗಳಕಾಲದ ಗ್ವಾಲಿಯರ್ ವಾಸದಲ್ಲಿ ಹಿಂದುಸ್ಥಾನಿ ಶಾಸ್ತ್ರೀಯ ಸಂಗೀತದಲ್ಲಿ ಸಾಧನೆ ಮಾಡುತ್ತಾರೆ. ತಮ್ಮ ೨೭ನೇ ವಯಸ್ಸಿನಲ್ಲಿ ಗ್ವಾಲಿಯರ್‌ನಿಂದ ಜಮಖಂಡಿ ಸಂಸ್ಥಾನಕ್ಕೆ ವಿಷ್ಣುಪಂತರು ಬಂದಾಗ ಅವರಿಗೆ ಇಲ್ಲಿ ವಿಶೇಷ ಗೌರವ ಸಿಕ್ಕಿತು.

ಸಹೋದರರೊಂದಿಗೆ ತಿಕೋಟಾಕ್ಕೆ ಬಂದು ನೆಲೆಸಿದ ವಿಷ್ಣುಪಂತರಿಗೆ ಸುತ್ತಲಿನ ಸಂಸ್ಥಾನಿಕರ ಸ್ನೇಹ ದೊರಕಿತು. ಸಂಸ್ಥಾನಿಕರು ಕುದುರೆಗಳನ್ನು ಖರೀದಿಸಲು ವಿಷ್ಣುಪಂತರನ್ನು ಮುಂಬಯಿಗೆ ಕರೆದೊಯ್ಯುತ್ತಿದ್ದರು. ಮುಂಬಯಿಗೆ ಹೋದಾಗಲೇ ಅವರು ವಿಲ್ಸನ್ ಸರ್ಕಸ್ ನೋಡಲು ಹೋಗಿದ್ದು. ಅಲ್ಲಿ ಸವಾಲು ಸ್ವೀಕರಿಸಿದ್ದು.

ವಿಷ್ಣು ಪಂತರ ಪತ್ನಿ ಅಬದಿಬಾಯಿ ಸಹ ಸರ್ಕಸ್‌ನಲ್ಲಿ ಸಿಂಹದ ಬಾಯಿಯೊಳಗೆ ತಲೆ ಇಟ್ಟು ಆಟ ಪ್ರದರ್ಶಿಸುತ್ತಿದ್ದರು. ಈ ನಡುವೆ ಅವರ ಕೊನೆಯ ಸಹೋದರ ಕಾಶಿನಾಥರು ಅಣ್ಣನಿಂದ ಸ್ಫೂರ್ತಿ ಪಡೆದು ತಿಕೋಟಾದಲ್ಲಿಯೇ ಪುಟ್ಟ ಸರ್ಕಸ್ ಕಂಪನಿ ಆರಂಭಿಸಿ ಜನಮನ ಸೆಳೆದಿದ್ದರು.

ವಾರಣಾಸಿಯಲ್ಲಿ ಸರ್ಕಸ್ ಕಂಪನಿಯೊಂದಿಗೆ ಬೀಡು ಬಿಟ್ಟಿದ್ದ ವಿಷ್ಣುಪಂತರಿಗೆ ಅದೊಂದು ದಿನ ದಾರಿ ಹೋಕನೊಬ್ಬ ಹಾಡುತ್ತಿರುವುದು ಕೇಳಿಸಿತು. ಆ ಲಯಬದ್ಧ ಗಾಯನದಿಂದ ಆಕರ್ಷಿತರಾದ ಅವರು ಧ್ವನಿ ಬಂದ ಕಡೆ ಧಾವಿಸಿದಾಗ ಅಲ್ಲಿ ತಮ್ಮ ಸಂಗೀತ ಗುರು ಹದ್ದೂಖಾನ್‌ರ ಮಗ ರಹಮತ್‌ಖಾನರು ಭಿಕ್ಷೆಗೆ ಕೈಯೊಡ್ಡಿ ಹಾಡುತ್ತಿರುವುದು ಕಂಡುಬಂತು. ಅದನ್ನು ಕಂಡು ಖಿನ್ನರಾದ ವಿಷ್ಣುಪಂತರು ತಮ್ಮ ಸರ್ಕಸ್ ಕಂಪನಿ ವ್ಯವಹಾರ ಕೈಬಿಡಲು ನಿರ್ಧರಿಸಿ ರಹಮತ್‌ಖಾನರನ್ನು ಕರೆದುಕೊಂಡು ಮುಂಬಯಿಗೆ ತೆರಳಿದರು.

ಅಲ್ಲಿಗೆ ಸಹೋದರ ಕಾಶೀನಾಥರನ್ನು ಕರೆಸಿಕೊಂಡು ಸರ್ಕಸ್ ಕಂಪನಿಯನ್ನು ಅವರಿಗೆ ವಹಿಸಿಕೊಟ್ಟ ವಿಷ್ಣುಪಂತರು ಗುರುಪುತ್ರ ರಹಮತ್‌ಖಾನರೊಂದಿಗೆ ದೇಶದ ನಾನಾ ಕಡೆಗಳಲ್ಲಿ ಸ್ಮರಣೀಯ ಸಂಗೀತ ಕಛೇರಿಗಳನ್ನು ನಡೆಸಿಕೊಟ್ಟರು. ಸರ್ಕಸ್ ಕಂಪನಿಯಿಂದ ಗಳಿಸಿದಷ್ಟೇ ಕೀರ್ತಿ ಮತ್ತು ಹಣವನ್ನು ಸಂಗೀತ ಕ್ಷೇತ್ರದಲ್ಲಿ ಸಂಪಾದಿಸಿ ಗುರು ಪುತ್ರನಿಗೆ ನೆರವಾದರು. ನಡು ವಯಸ್ಸು ದಾಟಿದ ನಂತರ ತಿಕೋಟಾಕ್ಕೆ ಬಂದು ೧೯೦೫ರಲ್ಲಿ ಅಲ್ಲಿಯೇ ನಿಧನರಾದರು.

ವಿಷ್ಣು ಪಂತರ ಸರ್ಕಸ್ ಕಂಪನಿ ಕಾಶಿನಾಥ ಪಂತರ ಕೈಗೆ ಬರುತ್ತಿದ್ದಂತೆ

ಹೊಸ ಬೆಳವಣಿಗೆಗಳನ್ನು ಕಂಡಿತು. ೧೮೯೦ರ ಹೊತ್ತಿಗೆ ಕಂಪನಿಯಲ್ಲಿ ಕಲಾವಿದರನ್ನೊಳಗೊಂಡ ೩೦೦ ಜನರಿದ್ದರು. ವಿವಿಧ ಪ್ರಾಣಿಗಳು ಸೇರ್ಪಡೆಯಾಗಿದ್ದವು. ಅವರಲ್ಲಿ ೨೫ಜನ ವಿದೇಶದ ಕಲಾವಿದರಿದ್ದುದ್ದು ವಿಶೇಷ.

೧೯೦೨ರಲ್ಲಿ ಕಾಶಿನಾಥಪಂಥರು ತಮ್ಮ ಸರ್ಕಸ್ ಕಂಪನಿಯೊಂದಿಗೆ ಶ್ರೀಲಂಕಾ, ಇಂಡೋಚೈನಾ, ಫಿಲಿಪೈನ್ಸ್, ಹಾಂಕಾಂಗ್ ಮತ್ತು ಅಮೆರಿಕದ ಪ್ರಮುಖ ನಗರಗಳಲ್ಲಿ ಪ್ರದರ್ಶನ ನೀಡಿದರು. ಲೋಕಮಾನ್ಯ ಬಾಲಗಂಗಾಧರ ತಿಲಕರು ಕಾಶಿನಾಥರ ನಿಕಟ ಸ್ನೇಹಿತರಾಗಿದ್ದರು. ತಿಲಕರು ತಮ್ಮ ಬಿಡುವಿನ ದಿನಗಳನ್ನು ಕಾಶಿನಾಥರ ಸರ್ಕಸ್ ಡೇರೆಯಲ್ಲಿ ಕಳೆಯುತ್ತಿದ್ದರು. ಭೂಗತ ದೇಶಭಕ್ತರಿಗೆ ಈ ಸರ್ಕಸ್ ಕಂಪನಿ ಸುರಕ್ಷಿತ ಸ್ಥಳವಾಗಿತ್ತು. ಅಷ್ಟೇ ಅಲ್ಲದೆ ಕಾಶಿನಾಥರು ರಾಷ್ಟ್ರೀಯ ಕೆಲಸಗಳಿಗೆ ಧನಸಹಾಯ ಮಾಡುತ್ತಿದ್ದರು.

೧೯೧೪ರಲ್ಲಿ ಕಾಶಿನಾಥರು ಕೊನೆ ಉಸಿರೆಳೆಯುವ ಮುನ್ನ ತಿಲಕರ ಸಮಕ್ಷಮದಲ್ಲಿ ತಮ್ಮ ಪುತ್ರ ದತ್ತೋಪಂತರಿಗೆ ಸರ್ಕಸ್ ವ್ಯವಹಾರವನ್ನು ವಹಿಸಿ ಕೊಟ್ಟರು. ಈ ಬಗ್ಗೆ ತಿಲಕರು ತಮ್ಮ ಕೇಸರಿ ಪತ್ರಿಕೆಯಲ್ಲಿ ಅಗ್ರಲೇಖನ ಬರೆದಿದ್ದರು.

ದತ್ತೋಪಂತರಿಗೆ ಅದೇಕೋ ಸರ್ಕಸ್ ವ್ಯವಹಾರದಲ್ಲಿ ಬಹಳ ದಿನಗಳ ಕಾಲ ಆಸಕ್ತಿ ಉಳಿಯಲಿಲ್ಲ. ಹತ್ತುವರ್ಷಗಳ ಕಾಲ ಸರ್ಕಸ್‌ಕಂಪನಿ ನಡೆಸಿ ೧೯೨೪ರಲ್ಲಿ ಉತ್ತಮ ಸ್ಥಿತಿಯಲ್ಲಿದ್ದ ಕಂಪನಿಯನ್ನು ಅಲ್ಲಿನ ಅಲ್ಲಿನ ಕಲಾವಿದರಿಗೆ ಬಿಟ್ಟುಕೊಟ್ಟು, ಬಿಜಾಪುರದ ಬಳಿಯ ತಿಕೋಟಾಕ್ಕೆ ಬಂದು ಕೃಷಿಯಲ್ಲಿ ತೊಡಗಿದರು. ಬಿಜಾಪುರಕ್ಕೆ ದ್ರಾಕ್ಷಿ ಬೆಳೆಯನ್ನು ತಂದು ಪರಿಚಯಿಸಿದ ಕೀರ್ತಿಯೂ ಸಹ ಇವರದ್ದಾಗಿದೆ. ಅವರು ೧೯೬೭ರಲ್ಲಿ ನಿಧನರಾಗುವವರೆಗೂ ಅವರ ಮನೆ ಸರ್ಕಸ್ ಕಲಾವಿದರ ಯಾತ್ರಾಸ್ಥಳವಾಗಿ ರೂಪುಗೊಂಡಿತ್ತು.

೧೯೦೦ರಲ್ಲಿ ಛತ್ರೆಯವರು ಬಿಜಾಪುರದಲ್ಲಿ ಸ್ಥಾಪಿಸಿದ್ದ 'ನರಸಿಂಹ ಸರ್ಕಸ್ ಕಂಪನಿ'ಯ ಸ್ಥಳವಿಂದು ಅವರದೇ ತ್ರಿಪುರಸುಂದರಿ ಚಿತ್ರಮಂದಿರವಾಗಿದೆ.

ನಮ್ಮವರೇ ಆದ ಸರ್ಕಸ್ ಪ್ರವರ್ತಕ ಛತ್ರೆ ಬಂಧುಗಳನ್ನು ನಾವು ಮರೆತಿದ್ದೇವೆ. ಆದರೆ ಮಹಾರಾಷ್ಟ್ರದಲ್ಲಿ ಅವರ ನೆನಪು ಸದಾ ಹಸಿರು. ೧೯೭೨ರಲ್ಲಿ ಭಾರತೀಯ ಸರ್ಕಸ್ ಆರಂಭಕ್ಕೆ ನೂರು ವರ್ಷ ತುಂಬಿದ ನೆನಪಿಗಾಗಿ ಸೊಲ್ಲಾಪುರದಲ್ಲಿ 'ಭಾರತೀಯ ಸರ್ಕಸ್ ಶತಾಬ್ದಿ ಮಹೋತ್ಸವ ಸಮಿತಿ' ಛತ್ರೆ ಬಂಧುಗಳನ್ನು ಸ್ಮರಿಸಿಕೊಂಡಿತು. ಛತ್ರೆಯವರ ಸರ್ಕಸ್ ಕಂಪನಿಯ ಬಗ್ಗೆ ಸ್ಮರಣ ಸಂಚಿಕೆ ರೂಪಿಸಿ ಅದರಲ್ಲಿ ಈ ಕಂಪನಿ ಕುರಿತು ಮಾಹಿತಿಗಳನ್ನು ದಾಖಲಿಸಿದ್ದಾರೆ.

ಭಾರತೀಯ ಸರ್ಕಸ್‌ಗೆ ಬುನಾದಿ ಹಾಕಿ ದೇಶ-ವಿದೇಶದಲ್ಲಿ ಹೆಸರಾದ ನಮ್ಮವರೇ ಆದ ಛತ್ರೆ ಬಂಧುಗಳನ್ನು ಸ್ಮರಿಸುವ ಕೆಲಸ ಇನ್ನಾದರೂ ಆಗಬೇಕಾಗಿದೆ. (ಸಾಭಾರ : ವಿಜಯ ಕರ್ನಾಟಕ)

***

ಹಳ್ಳಿಯ ಹುಡುಗನ ಇಂಗ್ಲಿಷ್ ಕಲಿಕೆ

–ಸುರೇಂದ್ರ ಕೌಲಗಿ

ಇಂಗ್ಲಿಷ್ ಭಾಷೆಯನ್ನು ಯಾವ ತರಗತಿಯಿಂದ ಬೋಧನೆ ಮಾಡಬೇಕು ಮತ್ತು ಶಿಕ್ಷಣದಲ್ಲಿ ಮಾತೃಭಾಷೆಯ ಸ್ಥಾನವೇನು? ಇತ್ಯಾದಿ ವಿಷಯಗಳ ಬಗ್ಗೆ ದೇಶದಾದ್ಯಂತ ತೀವ್ರವಾಗಿ ಚರ್ಚೆ ನಡೆಯುತ್ತಿವೆ, ಹೋರಾಟಗಳು ನಡೆಯುತ್ತಿವೆ, ಸಂವಾದ ಇತ್ಯಾದಿಗಳು ನಡೆಯುತಿವೆ. ಈ ವಿಚಾರವೊಂದು ಸಮುದ್ರ ಮಂಥನದಂತೆಯೆ ನಡೆಯುತ್ತಿದೆ. ಸಮುದ್ರ ಮಂಥನ ನಡೆದಷ್ಟು ಅಮೃತ ಬರುವುದರ ಬದಲಾಗಿ ವಿಷವೇ ಬರುತ್ತಿದೆ. ಅಂದರೆ ಕನ್ನಡ ಭಾಷೆ ತಲೆಯ ಮೇಲೆ ಇಂಗ್ಲಿಷ್ ಭಾಷೆಯ ಭಾರವನ್ನು ಹೊರಿಸಲಾಗುತ್ತಿದೆ. ದೇಶದ ಹಳ್ಳಿಗಾಡಿನ ಮಕ್ಕಳು ಈ ವಿವಾದದ ಸುಳಿಗೆ ಸಿಕ್ಕಿ ಎಂಥ ಘೋರ ಮಾನಸಿಕ ತುಮುಲಕ್ಕೆ ಸಿಕ್ಕಿದ್ದಾರೆಂಬುದು, ಈಗ ಇಂಗ್ಲಿಷ್ ಓದಿ ಸಮಾಜದ ಆಯಕಟ್ಟಿನ ಸ್ಥಾನದಲ್ಲಿ ಕುಳಿತಿರುವಂಥವರಿಗೆ ಅರ್ಥಮಾಡಿಕೊಳ್ಳಲು ಸಾಧ್ಯವೇ ಇಲ್ಲ. ಸಮಸ್ಯೆಯನ್ನು ಬಗೆಹರಿಸಲು ವಿಷಯದ ಗಂಭೀರತೆಯನ್ನು ಅರ್ಥಮಾಡಿಕೊಳ್ಳದೆ ಸಮಸ್ಯೆಯನ್ನು ಬಗೆಹರಿಸಲು ಮಾಡುವ ಪ್ರಯತ್ನ ಹಾವಿಲ್ಲದ ಹುತ್ತವನ್ನು ಬಡಿದಂತೆಯೆ ಸರಿ. ಈ ವಿಷಯದ ಗಂಭೀರತೆಯ ಅರ್ಥವಾಗಬೇಕಾದರೆ ಇಂಗ್ಲಿಷ್ ಓದಿಕೊಂಡು ಸುಖದ ಸುಪ್ಪತ್ತಿಗೆಯಲ್ಲಿರುವಂತವರು ಕೇವಲ ಕನ್ನಡ ಭಾಷೆಯನ್ನು ತಿಳಿದಿರುವ, ತೀರ ಹಿಂದುಳಿದ ಹಳ್ಳಿಯ, ತೀರ ಹಿಂದುಳಿದ ಜಾತಿಯ ಹುಡುಗನೊಬ್ಬನಿಗೆ ಇಂಗ್ಲಿಷ್ ಕಲಿಸುವ ಪ್ರಯತ್ನ ಮಾಡಿದರೆ ಹುಡುಗನ ಮನೋವಿಕಾಸಕ್ಕೆ ಕನ್ನಡ ಭಾಷೆ ಸೂಕ್ತವೋ, ಇಂಗ್ಲಿಷ್ ಭಾಷೆ ಸೂಕ್ತವೊ ಎಂಬುದು ತಾನಾಗಿಯೇ ಅರಿವಿಗೆ ಬರುವುದು. ಹೇಗೋ ಸ್ವಲ್ಪ ಇಂಗ್ಲಿಷನ್ನು ಕಲಿತಂಥ ಹುಡುಗನಿಗೆ ಇಂಗ್ಲಿಷ್ ಮಾಧ್ಯಮದ ಮೂಲಕ ಇಂಗ್ಲಿಷ್ ಕಲಿಸುತ್ತಾ ಹೋಗಿ ಅವನಿಗೆ ವ್ಯವಹಾರಿಕ ಇಂಗ್ಲಿಷ್ ಜ್ಞಾನ ಬರುವಂತೆ ಮಾಡಿ ದೊಡ್ಡ ಸಾಧನೆ ಮಾಡಿದೆಯೆಂದು ಭಾವಿಸುವ ಜನಕ್ಕೆ ತಮ್ಮ ಪ್ರಯತ್ನದ ತಪ್ಪಿನ ಅರಿವಾಯಿತು.

ಮೇಲಿನ ಮಾತನ್ನು ಪುಷ್ಟಿಗೊಳಿಸುವುದಕ್ಕೆ ಒಂದು ಪ್ರತ್ಯಕ್ಷ ಉದಾಹರಣೆಯನ್ನು ಕೊಡಬಯಸುತ್ತೇನೆ. ಇಲ್ಲಿ ಪ್ರಸ್ತಾಪಿಸಲಾಗುತ್ತಿರುವ ಬಾಲಕ, ಬಸ್ ಸೌಕರ್ಯವು, ದೂರವಾಣಿ ಸಂಪರ್ಕವು, ಅಂಚೆ ಸಂಪರ್ಕ ಇತರೆ ಯಾವುದೇ ಆಧುನಿಕ ಸೌಕರ್ಯಗಳಿರದಂಥ ಊರಿನವನು. ಅವನು ಜಾತಿಯಿಂದಲೂ, ಆರ್ಥಿಕವಾಗಿಯೂ ಹಿಂದುಳಿದ ಕುಟುಂಬಕ್ಕೆ ಸೇರಿದವನು. ತಂದೆ–ತಾಯಿಗಳು ಅನಕ್ಷರಸ್ಥರು. ದಿನಾಲೂ ಬೆಳಿಗ್ಗೆಯಿಂದ ಸಂಜೆಯವರೆಗೆ ಕೂಲಿ ಕೆಲಸಕ್ಕೆ ಹೋಗುತ್ತಾರೆ. ಇಂಥವರ ಮಗನಾದ ಈ ಹುಡುಗನು ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸವನ್ನು ತನ್ನ ಊರಿನ ಹತ್ತಿರದ ಶಾಲೆಯಲ್ಲಿ ಮುಗಿಸಿದ ನಂತರ ಎಂಟನೆ ತರಗತಿಗೆ ತಾಲ್ಲೂಕು ಕೇಂದ್ರಕ್ಕೆ ಹೋದ. ಅಲ್ಲಿ ವಾಸಕ್ಕಾಗಿ ಹಿಂದುಳಿದ ವರ್ಗದ ವಿದ್ಯಾರ್ಥಿನಿಲಯವನ್ನು ಸೇರಿಕೊಂಡ. ಆ ವಿದ್ಯಾರ್ಥಿನಿಲಯದಲ್ಲಿ ಬೇರೆ ಬೇರೆ ತರಗತಿಯ ಸುಮಾರು ೬೦ ವಿದ್ಯಾರ್ಥಿಗಳಿದ್ದಾರೆ. ಮೇಲ್ವಿಚಾರಕರು ತಮ್ಮ ಕರ್ತವ್ಯವನ್ನು ಚೆನ್ನಾಗಿ ನಿರ್ವಹಿಸುವುದಿಲ್ಲ. ಆದ್ದರಿಂದ ವಸತಿಗೃಹದಲ್ಲಿ

ಯಾವಾಗಲೂ ಗಲಾಟೆ, ಸದ್ದು. ಏಕಾಂತವಾಗಿ ಕುಳಿತುಕೊಂಡು ಓದಲು ಅವಕಾಶವೇ ಇಲ್ಲ. ಅವನು ಓದುತ್ತಿರುವ ಪ್ರೌಢಶಾಲೆಯ 8ನೇ ತರಗತಿಯಲ್ಲೊ ೮೦ ಜನ ವಿದ್ಯಾರ್ಥಿಗಳು! ಇಷ್ಟು ಮಕ್ಕಳಿಗೆ ಏಕಕಾಲಕ್ಕೆ ಇಂಗ್ಲಿಷ್ ಪಾಠ ನಡೆಯಬೇಕು. ಈ ವಿದ್ಯಾರ್ಥಿ ಎಂಟನೆ ತರಗತಿಗೆ ಬಂದಿದ್ದರೂ ಸಹ ಮೊದಲಿನ ತರಗತಿಗಳಲ್ಲಿ ಇಂಗ್ಲಿಷ್ ಭಾಷೆಯನ್ನು ಆಯಾ ಶಾಲೆಗಳಲ್ಲಿ ಸರಿಯಾಗಿ ಕಲಿಸಿಲ್ಲವಾದ್ದರಿಂದ ಎಂಟನೆ ತರಗತಿಯ ಇಂಗ್ಲಿಷ್ ಪುಸ್ತಕ ಈ ವಿದ್ಯಾರ್ಥಿಗೆ ಕಬ್ಬಿಣದ ಕಡಲೆಯಂತಾಗಿದೆ. ಇಂಗ್ಲಿಷ್ ಪಾಠ ಮಾಡುವ ಅಧ್ಯಾಪಕರು ಶ್ರದ್ಧೆಯಿಂದ ಪಾಠ ಮಾಡುವುದಿಲ್ಲ. ಈಗಲೂ ಸಹ ಅವನಿಗೆ I ಮತ್ತು Am ಈ ಶಬ್ದಗಳ ಅರ್ಥ ಸರಿಯಾಗಿ ಗೊತ್ತಿಲ್ಲ. ಈಗಾಗಲೆ ಅವನು ಐದು, ಆರು ಮತ್ತು ಏಳನೆ ತರಗತಿಗಳಲ್ಲಿ ಇಂಗ್ಲಿಷ್ ಕಲಿತಿದ್ದಾನೆ. ಆದರೂ ಸಹ I ಮತ್ತು Am ಶಬ್ದಗಳ ಅರ್ಥವನ್ನು ಸರಿಯಾಗಿ ಹೇಳಲು ಸಾಧ್ಯವಿಲ್ಲದವನಾಗಿದ್ದಾನೆ. ಎಂಟನೆ ತರಗತಿಯ ಇಂಗ್ಲಿಷ್ ಪಾಠಗಳೆಲ್ಲವು ವೈಚಾರಿಕ ದೃಷ್ಟಿಯಿಂದಲೂ, ಭಾಷಾ ದೃಷ್ಟಿಯಿಂದಲೂ, ವಿಷಯದ ದೃಷ್ಟಿಯಿಂದಲೂ ಪ್ರೌಢವಾಗಿವೆ. ಅವನಿಗೆ ಆ ಪಾಠದಲ್ಲಿ ಯಾವ ದೊಡ್ಡ ಇಂಗ್ಲಿಷ್ ಪದಗಳ ಸ್ಪೆಲ್ಲಿಂಗ್ ಗೊತ್ತಿಲ್ಲ. ಅರ್ಥವಂತೂ ಗೊತ್ತೇ ಇಲ್ಲ. ಈ ವಿದ್ಯಾರ್ಥಿಗೆ ಅವನ ಇಂಗ್ಲಿಷ್ ಪುಸ್ತಕದ ಮೊದಲ ಪಾಠದ ಕೆಲವು ವಾಕ್ಯಗಳ ಉಕ್ತಬರಹವನ್ನು ಕೊಟ್ಟಾಗ ಸುಮಾರು ೩೬ ಸ್ಪೆಲ್ಲಿಂಗ್ ತಪ್ಪುಗಳು ಕಂಡು ಬಂದವು. ಕಠಿಣ ಪದಗಳ ಅರ್ಥವನ್ನು ಬರೆಸಿದಾಗ ಅದರ ಪಟ್ಟಿ ೨೦೦ ಕ್ಕೂ ಹೆಚ್ಚಾಯಿತು. ಹೀಗೆ ಒಂದು ಇಂಗ್ಲಿಷ್ ಪಾಠದ ಕಲಿಕೆಗೆ ಇಷ್ಟು ಅಡಚಣೆಯಿರುವಾಗ ಇನ್ನು ಇಂಗ್ಲಿಷ್ ವ್ಯಾಕರಣವನ್ನು ತಿಳಿದುಕೊಂಡು ಸ್ವಂತ ವಾಕ್ಯಗಳಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಬರೆಯುವ ಸಾಮರ್ಥ್ಯವನ್ನು ಪಡೆಯುವುದು ಯಾವಾಗ? ಈ ಮಧ್ಯೆ ರಜೆಗಳ ಹಾವಳಿ. ಇಂಥ ಪರಿಸ್ಥಿತಿಯ ಬಹುಶಃ ಹಳ್ಳಿಗಳಲ್ಲಿ ೨೦೦೬-೨೦೦೭ ನೇ ಸಾಲಿನಲ್ಲಿ ಓದುತ್ತಿರುವ ಮಕ್ಕಳ ಸ್ಥಿತಿ ಇದೆ. ಈ ಮಕ್ಕಳು ಇಂಗ್ಲಿಷ್ ಮಾಧ್ಯಮದ ಮಕ್ಕಳ ಜೊತೆಗೆ ಹೇಗೆ ಸ್ಪರ್ಧೆ ಮಾಡಲು ಸಾಧ್ಯ? ಇದೇ ವಿದ್ಯಾರ್ಥಿಗೆ ಅದೇ ತರಗತಿಯ ಕನ್ನಡ ಪುಸ್ತಕವನ್ನು ಓದಿಸಿದಾಗ ಮತ್ತು ಬರೆಸಿದಾಗ ಅವನ ತಿಳುವಳಿಕೆ ಉತ್ತಮವಾಗಿಯೇ ಇದ್ದುದು ಕಂಡು ಬಂತು. ಇಂಗ್ಲಿಷ್ ಭಾಷೆಯನ್ನು ಕಲಿಯುವುದಕ್ಕೆ ಹೆಚ್ಚುವಯಸ್ಸಿನ ಅಗತ್ಯವಿದೆ. ಈ ಲೇಖನದಲ್ಲಿ ತಿಳಿಸಿರುವ ವಿದ್ಯಾರ್ಥಿಯ ವಯಸ್ಸನ್ನು ಗಣನೆಗೆ ತೆಗೆದುಕೊಂಡರೆ ೧೨ ನೇ ವಯಸ್ಸಿನಿಂದ ಇಂಗ್ಲಿಷ್ ಕಲಿಯುವುದು ಹೆಚ್ಚು ಸುಲಭವೆಂದೆನಿಸುತದೆ. ಏಕೆಂದರೆ ಆ ವೇಳೆಗೆ ಅವನು ಕನ್ನಡ ಭಾಷೆಯನ್ನು ಸರಿಯಾಗಿ ತಿಳಿದುಕೊಂಡಿರುತ್ತಾನೆ. ಕನ್ನಡ ಭಾಷೆಯ ಪರಿಚಯದ ಆಧಾರದ ಮೇಲೆ ಇಂಗ್ಲಿಷ್ ಭಾಷೆಯನ್ನು ಕಲಿಯುವುದು ಅವನಿಗೆ ಸುಲಭವಾಗುತ್ತದೆ. ಅಲ್ಲದೆ ಅವನಿಗೆ ಸುತ್ತಲಿನ ಪ್ರಪಂಚದ ಅರಿವು ಉಂಟಾಗುತ್ತದೆ. ಆಗ ಅವನ ಇಂಗ್ಲಿಷ್ ಕಲಿಕೆಯಲ್ಲಿ ವೇಗವುಂಟಾಗುತ್ತದೆ. ಮತ್ತು ಕಳೆದು ಹೋದ ಸಮಯವನ್ನು ಸರಿದೂಗಿಸಿಕೊಳ್ಳುತ್ತಾನೆ. ಮುಂದೆ ಅವನು ತನ್ನ ಪ್ರಯತ್ನದಿಂದ ಮತ್ತು ಅಧ್ಯಾಪಕರ ಮಾರ್ಗದರ್ಶನದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸುತ್ತಾ ಹೋಗುತ್ತಾನೆ. ನೀರು ಹೋಗದ ಗಂಟಲಲ್ಲಿ ಕಡುಬನ್ನು ತುರುಕುವ ಇಂದಿನ ಇಂಗ್ಲಿಷ್ ಭಾಷಾ ಬೋಧನಾ ಪ್ರಯತ್ನಕ್ಕೆ ಇತಿಶ್ರೀ ಹಾಡಿದಂತಾಗುತ್ತದೆ.

* * *

ಜನಪದ ನಿಲಯದ ಅಂತರಂಗದಲ್ಲಿ..........೩೧

-ಸುರೇಂದ್ರ ಕೌಲಗಿ



ಸೇವೆಗಾಗಿ ನಾವು ಸಂಸ್ಥೆಯನ್ನು ಸ್ಥಾಪಿಸುತ್ತೇವೆ. ಅದು ಪ್ರಾರಂಭವಾಗುವುದು ಮೊದಲು ವ್ಯಕ್ತಿಯ ಮೂಲಕ. ಆ ವ್ಯಕ್ತಿಯೇ ಅದಕ್ಕೆ ಮುಖ್ಯ ಆಧಾರ. ಸಂಸ್ಥೆ ಮೊದಲಿಗೆ ವ್ಯಕ್ತಿನಿಷ್ಠವಾಗಿದ್ದರೂ ಮುಂದೆ ವಿಕಾಸವಾದಂತೆ ತತ್ವನಿಷ್ಠವಾಗಬೇಕು. ಹಾಗಹಾಗದಿದ್ದಲ್ಲಿ, ಸ್ಫೂರ್ತಿಕೊಡುವ ಆ ವ್ಯಕ್ತಿ ಇಲ್ಲದಾಗುತ್ತಲೂ ಸಂಸ್ಥೆಯಲ್ಲಿ ಅವ್ಯವಸ್ಥೆ ತಲೆದೋರಿತು.

-ವಿನೋಬಾ

೧೯೬೧. ಗಿರಿಜಾ ಮತ್ತು ನನ್ನ ಜೀವನದಲ್ಲಿ ಮಹತ್ವದ ವರ್ಷ. ಈ ವರ್ಷದ ಆಗಸ್ಟ್ ತಿಂಗಳಿನಲ್ಲಿ ನಮಗೆ ಗಂಡು ಮಗುವಿನ ಜನನವಾಯಿತು. ಕೆಂಪಿಸಿದ್ಧನಹುಂಡಿಯಲ್ಲಿ ಹೆರಿಗೆಗೆ ಸಂಬಂಧಿಸಿದಂತೆ ಯಾವ ಅನುಕೂಲಗಳು ಇಲ್ಲದೆ ಇದ್ದದರಿಂದ ನಾನು ಗಿರಿಜಾರವರನ್ನು ಕರೆದುಕೊಂಡು ನಂಜನಗೂಡಿನ ಸರ್ಕಾರಿ ಆಸ್ಪತ್ರೆಗೆ ಹೋಗಬೇಕಾಯಿತು. ದೇವರ ದಯೆಯಿಂದ ಗಿರಿಜಾರವರ ಆರೋಗ್ಯ ಚೆನ್ನಾಗಿದ್ದುದರಿಂದ ಹಳ್ಳಿಯಲ್ಲಿ ಈಗಿನ ಕಾಲದಂತೆ ಮನೆಮನೆಗೆಬಂದು ಗರ್ಭಿಣಿಯರ ಆರೋಗ್ಯ ವಿಚಾರಿಸುವ ಸರ್ಕಾರಿ ಸೇವಕಿಯರು ಇರಲಿಲ್ಲವಾದರೂ ನಾವೂ ಬಹುಮಟ್ಟಿಗೆ ನಿಶ್ಚಿಂತವಾಗಿದ್ದೆವು. ಈ ಸಮಯದಲ್ಲಿ ನಮ್ಮೊಂದಿಗೆ ಇರಲು ನನ್ನ ತಾಯಿಯವರು ಬಂದಿದ್ದರು. ನನ್ನ ತಾಯಿಯವರು ಹಿಂದಿನ ಸಂಪ್ರದಾಯ ನಿಷ್ಠರು. ಅವರೆಂದೂ ಹಳ್ಳಿಯ ಜೀವನ ನಡೆಸಿದವರಲ್ಲ ಮತ್ತು ವಿವಿಧ ಪ್ರಕಾರದ ಜನರೊಂದಿಗೆ ಹೆಚ್ಚಾಗಿ ಬೆರೆತವರಲ್ಲ. ಆದರೂ ಸಹ ಕೆಂಪಿಸಿದ್ಧನಹುಂಡಿಯಲ್ಲಿ ಅನೇಕ ತೊಂದರೆಗಳ ಮಧ್ಯೆಯೂ ನಮ್ಮೊಂದಿಗೆ ಸಂತೋಷವಾಗಿದ್ದರು. ಮೊಮ್ಮಗನ ಬರುವಿಕೆಯು ನೀರಿಕ್ಷೆಯುಲ್ಲಿ ಬಹುಶಃ ತಮ್ಮೆಲ್ಲ ತೊಂದರೆಗಳನ್ನು ಕಡೆಗಾಣಿಸಿದ್ದರೇನೋ. ಹೆರಿಗೆಯ ಸಮಯ ಬಂದಾಗ ಹಳ್ಳಿಯವರನ್ನು ವಿನಂತಿಸಿಕೊಂಡು ಒಂದು ಎತ್ತಿನಗಾಡಿಯ ವ್ಯವಸ್ಥೆ ಮಾಡಿಕೊಂಡೆ. ಆ ಗಾಡಿಯಲ್ಲಿ ಮೆತ್ತನೆಗಾಗಿ ಹುಲ್ಲುಹಾಸಿ ಅದರ ಮೇಲೆ ಒಂದು ಕಂಬಳಿಯನ್ನು ಹಾಕಿ ಗಿರಿಜಾರವರನ್ನು ಮತ್ತು ನನ್ನ ತಾಯಿಯನ್ನು ಕೂರಿಸಿಕೊಂಡು ನಂಜನಗೂಡಿನತ್ತ ನಡೆದೆ. ಹುಂಡಿಯಿಂದ ನಂಜನಗೂಡಿನವರೆಗಿನ ಸುಮಾರು ಮೂರು ಮೈಲಿ

ದೂರವನ್ನು ನಾನು ಗಾಡಿಯ ಹಿಂದೆ ನಡೆದುಕೊಂಡೆ ಹೋದೆ. ಹುಂಡಿಯಿಂದ ಬಸವನಪುರದವರೆಗೆ ಮಣ್ಣಿನ ರಸ್ತೆಯಿತ್ತು. ಅದು ಮೈಸೂರು ನಂಜನಗೂಡಿನ ಮುಖ್ಯರಸ್ತೆಗೆ ಬಂದು ಸೇರುತ್ತಿತ್ತು. ಅಲ್ಲಿಂದ ಮುಂದೆ ನಂಜನಗೂಡಿನವರೆಗೆ ಟಾರು ರಸ್ತೆಯಿತ್ತು. ಎಡಭಾಗದಲ್ಲಿ ಮೈಸೂರು ನಂಜನಗೂಡು, ಚಾಮರಾಜನಗರದ ನ್ಯಾರೋಗೇಜ್ ರೈಲು ಕಂಬಿ ಇತ್ತು. ರಸ್ತೆಗೂ ಮತ್ತು ರೈಲುದಾರಿಗೂ ಮಧ್ಯೆ ಕಪಿಲಾ ಹೊಳೆಗೆ ಸೇತುವೆಯನ್ನು ಕಟ್ಟಿದ್ದರು. ರಸ್ತೆಯ ಮೇಲಿನ ಸೇತುವೆಯ ಮೇಲೆ ಹೋಗುವುದೆಂದರೆ ಒಂದು ಸಂತೋಷದ ಸಂಗತಿಯಾಗಿತ್ತು. ಕಪಿಲಾ ನದಿಯ ಪಾತ್ರ ದೊಡ್ಡದಾಗಿರುವುದರಿಂದ ನೀರು ಹರಿಯುವುದನ್ನು ನೋಡುವುದು ಮನಸ್ಸಿಗೆ ಮುದವನ್ನು ಕೊಡುತ್ತಿತ್ತು. ಕೆಲವರು ನಡೆದುಕೊಂಡೆ ಹೊಳೆದಾಟುತ್ತಿದ್ದರು. ಇನ್ನೊಂದು ಕಡೆ ಸಣ್ಣ ತೆಪ್ಪದಲ್ಲಿ ಕೆಲವರು ಹೊಳೆದಾಟುತ್ತಿದ್ದರು. ಈ ಸೇತುವೆಯ ಅನತಿ ದೂರದಲ್ಲಿ ರೈಲ್ವೆ ಕಂಬಿಯೂ ಇದ್ದುದರಿಂದ ಕೆಲವೊಮ್ಮೆ ರಸ್ತೆ ಸೇತುವೆಯ ಮೇಲೆ ನಡೆದುಹೋಗುತ್ತಿದ್ದಾಗ ಮೈಸೂರು ಕಡೆಯಿಂದಾಗಲಿ, ನಂಜನಗೂಡು ಕಡೆಯಿಂದಾಗಲಿ ರೈಲು ಹೋಗುವುದನ್ನು ನೋಡುವುದರಲ್ಲಿ ಒಂದು ಕುತೂಹಲವಿರುತ್ತಿತ್ತು. ಹೀಗೆ ಈ ಸೇತುವೆಯನ್ನು ದಾಟಿ ಮುಂದೆ ಸ್ವಲ್ಪ ದೂರ ನಡೆದುಕೊಂಡು ಬಂದರೆ ಸುಜಾತ ಬಟ್ಟೆ ಗಿರಣಿಯಿತ್ತು. ಬಹಳಷ್ಟು ಕಾರ್ಮಿಕರು ಸೈಕಲ್ ಮೇಲೆ ಓಡಾಡುತ್ತಿದ್ದರು. ಮಿಲ್ ಎದುರಿಗೆ ಒಂದು ರೈಲ್ವೆ ನಿಲ್ದಾಣವೂ ಸಹ ಇತ್ತು. ಆದ್ದರಿಂದ ಹುಂಡಿಯಿಂದ ನಂಜನಗೂಡಿಗೆ ನಡೆಯುವ ಪ್ರಯಾಸವೇ ಗೊತ್ತಾಗುತ್ತಿರಲಿಲ್ಲ. ಈ ರಸ್ತೆಯ ಮೂಲಕ ನಮ್ಮ ಎತ್ತಿನಗಾಡಿ ಹಾದು ಹೋಗಿ ಬಸ್‌ನಿಲ್ದಾಣದ ಬಳಿಯಿದ್ದ ಕನಕದಾಸ ಹಾಸ್ಟಲ್ ಬಳಿ ನಿಂತಿತು. ನಾನು ಮೊದಲೆ ಕೃಷ್ಣಯ್ಯನವರ ಮೂಲಕ ಆ ಹಾಸ್ಟಲ್‌ನಲ್ಲಿ ನಮಗಾಗಿ ಒಂದು ಕೋಣೆಯನ್ನು ಬಿಡಿಸಿಟ್ಟುಕೊಂಡಿದ್ದೆ. ಆ ಕೋಣೆಯಲ್ಲಿ ನಾವು ನಮ್ಮ ಎಲ್ಲ ಸಾಮಾನುಗಳನ್ನು ಇರಿಸಿಕೊಂಡು ಗಿರಿಜಾರವರ ಹೆರಿಗೆಯ ಸಮಯಕ್ಕಾಗಿ ಕಾಯುತ್ತ ಕುಳಿತೆವು. ಮಡಿವಂತಿಕೆಯ ಸ್ವಭಾವದವರಾಗಿದ್ದ ನನ್ನ ತಾಯಿಯವರಿಗೆ ಅಲ್ಲಿ ಬಹಳಷ್ಟು ಸಂಕೋಚವಾಯಿತು. ಆದರೆ ಬೇರೆ ದಾರಿಯಿರಲಿಲ್ಲ. ಆ ಹಾಸ್ಟಲ್‌ನಲ್ಲಿ ನಾವು ಎರಡು ದಿನ ಇರುವಷ್ಟರಲ್ಲಿ ಹೆರಿಗೆಯ ಸಮಯ ಬಂದಿತು. ಹಿಂದಿನ ರಾತ್ರಿ ಒಂದು ಕುದುರೆಗಾಡಿಯನ್ನು ಗೊತ್ತುಮಾಡಿಟ್ಟಿದ್ದೆ. ಬೆಳಿಗ್ಗೆ ಹೆರಿಗೆ ನೋವು ಶುರುವಾಗುತ್ತಲೆ ಕೂಡಲೆ ಗಿರಿಜಾರವರನ್ನು ಹತ್ತಿರದಲ್ಲಿಯೆ ಇದ್ದ ಸರ್ಕಾರಿ ಅಸ್ಪತ್ರೆಗೆ ಕರೆದುಕೊಂಡು ಹೋದೆ. ತಾಯಿಯವರು ಸಹ ಜೊತೆಯಲ್ಲಿದ್ದರು. ಆಸ್ಪತ್ರೆಯಲ್ಲಿ ಸೇರಿಸಿದ್ದಾಯಿತು. ಆಗಸ್ಟ್ ೮, ೧೯೬೧ ರಂದು ಗಂಡು ಮಗುವಿನ ಜನನವಾಯಿತು. ನಮಗೆಲ್ಲ ಬಹಳ ಸಂತೋಷವಾಯಿತು. ಈ ಸಂತಸದ ಸಂಗತಿಯನ್ನು ಬೆಂಗಳೂರಿನಲ್ಲಿದ್ದ ನನ್ನ ಅಣ್ಣ–ಅತ್ತಿಗೆ ಹಾಗೂ ತಂದೆಯವರಿಗೆ ತಿಳಿಸಿದೆ. ನನ್ನ ಅಣ್ಣನವರಿಗೆ ಸಂತತಿಯ ಭಾಗ್ಯ ಇಲ್ಲದೆ ಇದ್ದುದರಿಂದ ನನಗೆ ಒಬ್ಬ ಮಗ

ಹುಟ್ಟಿರುವ ಸಂಗತಿ ತಿಳಿದು ಅವರಿಗೆ ವಿಶೇಷ ಆನಂದವಾಯಿತು. ಹೆರಿಗೆಯ ನಂತರ ಆಸ್ಪತ್ರೆಯಲ್ಲಿ ಮೂರು ದಿನವಿದ್ದು ನಂತರ ನಾವು ಹುಂಡಿಗೆ ಬಂದೆವು, ಬರುವಾಗ ಕುದುರೆ ಗಾಡಿಯಲ್ಲಿ ಬಂದೆವು. ನಾವು ಹುಂಡಿಯಲ್ಲಿದ್ದಾಗ ನಂಜನಗೂಡಿನಲ್ಲಿ ಕಳಲೆ ಸೀತಾರಾಮ್ ಎಂಬುವವರ ಪರಿಚಯ ವಾಗಿತ್ತು. ಇವರು ನಂಜನಗೂಡು ಪಕ್ಕದ ಕಳಲೆಯವರು. ತಾಲ್ಲೂಕಿನ ರಾಜಕಾರಣದಲ್ಲಿ ಸಕ್ರಿಯವಾಗಿದ್ದರು. ಇವರ ಹೆಂಡತಿ ಸೀತಾಲಕ್ಷಮ್ಮ. ಇವರಿಗೆ ಸಮಾಜಸೇವೆಯಲ್ಲಿ ಆಸಕ್ತಿಯಿತ್ತು. ನಂಜನಗೂಡಿನಲ್ಲಿ ಮಹಿಳಾ ಮಂಡಳಿಯನ್ನು ಸ್ಥಾಪಿಸಿ ಕೆಲವು ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ಇವರು ಒಂದೆರಡು ಬಾರಿ ಕೆಂಪಿಸಿದ್ದನಹುಂಡಿಯ ನಮ್ಮ ಮನೆಗೂ ಬಂದು ಹೋಗಿದ್ದರು. ನಮ್ಮ ತಾಯಿಯವರ ಪರಿಚಯವನ್ನು ಮಾಡಿಕೊಂಡಿದ್ದರು. ನಂಜನಗೂಡಿನಿಂದ ಹುಂಡಿಗೆ ಬಂದ ಮೇಲೆ ಹಳ್ಳಿಯವರಿಂದ ಒಂದು ಬಿದಿರಿನ ತೊಟ್ಟಿಲನ್ನು ಎರವಲು ಪಡೆದು ನಮ್ಮ ಮಗುವನ್ನು ಅದರಲ್ಲಿ ಮಲಗಿಸಿ ತೂಗಿ ಸಂತೋಷಪಟ್ಟೆವು. ನಾಮಕರಣಕ್ಕಾಗಿ ಸೀತಾಲಕ್ಷಮ್ಮನವರನ್ನು ಆಹ್ವಾನಿಸಿದ್ದೆವು. ನಾಮಕರಣದ ದಿನದಂದು ಅಕ್ಕಪಕ್ಕದ ಮನೆಯವರನ್ನು ಆಹ್ವಾನಿಸಿದ್ದೆವು ಮಗುವನ್ನು ತೊಟ್ಟಿಲಲ್ಲಿ ಮಲಗಿಸಿ ಕೆಲವು ವಿಧಿ-ವಿಧಾನಗಳನ್ನು ನಡೆಸಿ ಸೀತಾಲಕ್ಷಮ್ಮನವರು ಮಗುವಿಗೆ "ಸಂತೋಷ್" ಎಂದು ನಾಮಕರಣ ಮಾಡಿದರು. ಮತ್ತು ನಂತರ ತೊಟ್ಟಿಲು ತೂಗುತ್ತಾ ಕೃಷ್ಣನನ್ನು ಕುರಿತಾದ ಗೀತೆಯೊಂದನ್ನು ಹೇಳಿದರು. ಎಲ್ಲರಿಗೂ ಸಿಹಿ ಹಂಚುವುದರ ಮೂಲಕ ನಾಮಕರಣದ ಕಾರ್ಯಕ್ರಮ ಮುಗಿಯಿತು. ಈ ಮಧ್ಯೆ ನಾನೊಂದು ಪುಟ್ಟ ಸಾಹಸ ಮಾಡಲು ಪ್ರಯತ್ನಿಸಿದೆ, ನನಗೆ ಗಾಂಧಿ, ವಿನೋಬಾ, ಜೆ.ಪಿ ಮುಂತಾದವರ ಪ್ರಭಾವದಿಂದಲೊ ಏನೋ ಮೊದಲಿನಿಂದಲೂ ಗ್ರಾಮ ಪಂಚಾಯಿತಿಗಳ ಬಗ್ಗೆ ಎಲ್ಲಿಲ್ಲದ ಆಕರ್ಷಣೆ. ಗ್ರಾಮ ಪಂಚಾಯಿತಿ ಎಂಬ ಹೆಸರೆ ನನ್ನನ್ನು ಪುಳಕಿತನನ್ನಾಗಿ ಮಾಡುತ್ತಿತ್ತು. ಯಾವಾಗಲೂ ಆದರ್ಶ ಗ್ರಾಮ ಪಂಚಾಯಿತಿಯ ಕನಸನ್ನು ನಾನು ಕಾಣುತ್ತಿದ್ದೆ. ಅನೇಕ ಸಲ ನಾನೇ ಸ್ವತಃ ಗ್ರಾಮ ಪಂಚಾಯಿತಿಯ ಅಧ್ಯಕ್ಷನಾಗಿದ್ದರೆ? ಏನೆಲ್ಲ ಮಾಡುತ್ತಿದ್ದನೆಂಬ ಬಗ್ಗೆ ಕಲ್ಪಿಸಿಕೊಳ್ಳುತ್ತಿದ್ದೆ. ವಾಸ್ತವ ಜಗತ್ತಿಗೆ ಬಂದಾಗ ಅದೆಲ್ಲವು ಹಗಲುಗನಸೆಂದು ಗೊತ್ತಾಗುತ್ತಿತ್ತು. ಆದರೂ ಕೂಡ ಪಂಚಾಯಿತಿಗಳ ಬಗ್ಗೆ ಕನಸುಕಾಣುವುದು ಮಾತ್ರ ತಪ್ಪಲಿಲ್ಲ. ಇಂಥ ಕನಸಿನ ಪ್ರಭಾವದಿಂದಾಗಿ ಪಂಚಾಯಿತಿಗಳ ಬಗ್ಗೆ ಏನಾದರೊಂದು ಕೆಲಸ ಮಾಡಬೇಕೆಂಬ ಹುಚ್ಚು ಸಾಹಸಕ್ಕೆ ಮೊದಲಿಟ್ಟೆ. ಆಗತಾನೆ ಗ್ರಾಮಪಂಚಾಯಿತಿಗಳ ಚುನಾವಣೆಯಾಗಿತ್ತು. ನನ್ನ ಸ್ನೇಹಿತರಾದ ಎಂ.ಕೃಷ್ಣಯ್ಯನವರು ನಂಜನಗೂಡು ತಾಲ್ಲೋಕು ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾಗಿದ್ದರು. ಅವರು ಸಹ ತುಂಬಾ ಉತ್ಸಾಹಿಗಳಾಗಿದ್ದರು. ಆದರೆ ಚುನಾವಣೆಯಲ್ಲಿಯ ಹೊಲಸು ರಾಜಕೀಯದ ಬಗ್ಗೆ ಅಗಾಗ್ಗೆ ನನ್ನಲ್ಲಿ

ಪ್ರಸ್ತಾಪಿಸುತ್ತಿದ್ದರು. ಅವರು ಕೈಗೊಳ್ಳಬೇಕೆಂದು ಬಯಸುತ್ತಿದ್ದ ಯೋಜನೆಗಳನ್ನು ಹೇಗೆ ವಿರೋಧಿಗಳು ನಿರಶನಗೊಳಿಸುತ್ತಿದ್ದರೆಂಬುದನ್ನು ಗಂಟೆಗಟ್ಟಳೆ ಹೇಳುತ್ತಿದ್ದರು. ಅವರಿಗೆ ಆಗಿನ ಕಾಲದಲ್ಲಿ ಶ್ರೀಹೆಜ್ಜಿಗೆ ಲಿಂಗಣ್ಣ ಅವರು ಕಾಂಗ್ರೆಸ್ ಪಕ್ಷದವರೆ ಆಗಿದ್ದರೂ ಕೃಷ್ಣಯ್ಯನವರ ವಿರೋಧಿಯಾಗಿದ್ದರು. ಲಿಂಗಣ್ಣನವರು ಖಾಸಗಿ ಜೀವನದಲ್ಲಿ ಕವಿಯೂ ಆಗಿದ್ದರು. ಅವರ ಒಂದೆರಡು ಕವನವನ್ನು ಓದಿ ಅವರ ಬಗ್ಗೆ ಮೆಚ್ಚುಗೆಯನ್ನು ಬೆಳಸಿಕೊಂಡಿದ್ದೆ. ಅಂಥ ವ್ಯಕ್ತಿಯ ಕೆಲ ಸಣ್ಣತನದ ಬಗ್ಗೆ ಕೃಷ್ಣಯ್ಯನವರು ಹೇಳಿದಾಗ ಆಶ್ಚರ್ಯವಾಗುತ್ತಿತ್ತು. ಒಬ್ಬ ವ್ಯಕ್ತಿ ಹೇಗೆ ಏಕ ಕಾಲಕ್ಕೆ ಎರಡು ಮುಖಗಳನ್ನು ಹೊತ್ತಿರುತ್ತಾನೆಂಬುದಕ್ಕೆ ಲಿಂಗಣ್ಣ ಅವರು ಒಂದು ಉದಾಹರಣೆ ಎನಿಸುತ್ತಿತ್ತು.

ಪಂಚಾಯಿತಿಯ ಬಗೆಗಿನ ನನ್ನ ಹುಚ್ಚು ಒಂದು ಮಾಸ ಪತ್ರಿಕೆಯನ್ನು ತರುವಂತೆ ಮಾಡಿತು. ಕೊನೆಗೆ ತುಂಬಾ ಯೋಚನೆ ಮಾಡಿ "ಜನಪದ" ಎಂಬ ಹೆಸರಿನಲ್ಲಿ ಕ್ರೌನ್ ೧/೪ ಅಳತೆಯ ಪತ್ರಿಕೆ ಹೊರಡಿಸಲು ಪ್ರಾರಂಭಿಸಿದೆ. ಯಾವ ಸೌಕರ್ಯವೂ ಇಲ್ಲದಂಥ ಕೆಂಪಿಸಿದ್ಧನಹುಂಡಿಯಂಥ ಒಂದು ಗ್ರಾಮದಲ್ಲಿ ಕುಳಿತು ಪತ್ರಿಕೆ ಹೊರಡಿಸುವುದು ಕಷ್ಟವೆಂಬುದು ಉತ್ಸಾಹದ ಭರದಲ್ಲಿ ಅನಿಸಲೆ ಇಲ್ಲ. ಈ ಪತ್ರಿಕೆಗೆ ಬೇಕಾದ ಸಾಹಿತ್ಯವನ್ನು ನಾನೇ ಒದಗಿಸಿಕೊಂಡು ಬರೆದು ನಂಜನಗೂಡಿನಲ್ಲಿದ್ದ ಕಪಿಲ ಪವರ್ ಪ್ರೆಸ್‌ನಲ್ಲಿ ಮುದ್ರಿಸಿಕೊಳ್ಳುತ್ತಿದ್ದೆ. ಆ ಕಾಲದಲ್ಲಿ ಈ ಮುದ್ರಣಾಲಯವೇ ನಂಜನಗೂಡಿನಲ್ಲಿ ಪ್ರಸಿದ್ಧವಾದ ಮುದ್ರಣಾಲಯವಾಗಿತ್ತು. ಆ ಪತ್ರಿಕೆಯಲ್ಲಿ ಯಥಾ ಪ್ರಕಾರ ಗಾಂಧೀಜಿಯವರ ಪಂಚಾಯಿತಿಗೆ ಸಂಭಂದಿಸಿದ ವಿಚಾರಗಳನ್ನು ಸಹ ಸೇರಿಸಿಕೊಳ್ಳುತ್ತಿದ್ದೆ. ಮತ್ತು ನನಗೆ ಗೊತ್ತಾದ ಕೆಲ ಗ್ರಾಮ ಪಂಚಾಯಿತಿಗಳ ತೀರ್ಮಾನಗಳನ್ನು ಮತ್ತು ಕಾರ್ಯಕ್ರಮಗಳನ್ನು ಪ್ರಕಟಿಸುತ್ತಿದ್ದೆ. ನಂಜನಗೂಡು ತಾಲ್ಲೋಕು ಬಹು ದೊಡ್ಡ ತಾಲ್ಲೋಕು. ತಾಲ್ಲೋಕಿನಲ್ಲಿ ಯಾವುದೇ ಪಂಚಾಯಿತಿಯ ಸಭೆ ನಡೆದರೆ ಅಲ್ಲಿಗೆ ಹೋಗಿ ವಿಷಯ ಸಂಗ್ರಹಿಸಲು ಪ್ರಯತ್ನಿಸುತ್ತಿದ್ದೆ. ಒಂದೆರಡು ಸಲ ತಾಲ್ಲೋಕು ಪಂಚಾಯಿತಿ ಸಭೆಯಲ್ಲಿ ಹೋಗಿ ಕುಳಿತಿದ್ದು ನೆನಪು. ಆದರೆ ಯಾವ ಪಂಚಾಯಿತಿಯವರೂ ನಾನೊಬ್ಬ ಪತ್ರಿಕಾಕರ್ತನೆಂದಾಗಲಿ, ಸರ್ವೋದಯ ವಿಚಾರದ ಕಾರ್ಯಕರ್ತನೆಂದಾಗಲಿ ಗುರ್ತಿಸುತ್ತಿದ್ದರೆಂದು ನನಗೆ ಅನಿಸಲೆ ಇಲ್ಲ. ರಾಜಕಾರಣದ ಭರಾಟೆಯಲ್ಲಿ ಇಂಥ ವ್ಯಕ್ತಿಗಳಿಗೆ ಸ್ಥಾನವೆಲ್ಲಿ? ಹಲವಾರು ಸಂಚಿಕೆಗಳನ್ನು ಕಷ್ಟಪಟ್ಟು ಹೊರಡಿಸಿದೆ. ಹಣಕಾಸಿನ ಮುಗ್ಗಟ್ಟು ಮತ್ತು ಇತರೆ ಸೌಲಭ್ಯಗಳ ಕೊರತೆಯಿಂದಾಗಿ ಜನಪದ ಪತ್ರಿಕೆಯನ್ನು ಬಹು ಭಾರವಾದ ಮನಸ್ಸಿನಿಂದ ನಿಲ್ಲಿಸಿದೆ.

....ಮುಂದುವರಿಯುವುದು

***

ವಾಚಕ ಮಿತ್ರರಲ್ಲಿ ವಿನಂತಿ.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೆ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಅದರಲ್ಲಿಯೂ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಹ ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ನಿಮ್ಮನ್ನು ಜನಪದ ವಿಚಾರದ ಲೇಖಕರ ಬಳಗಕ್ಕೆ ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ 15 ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ (–ಸಂಪಾದಕರು)

ತೆರೆದ-ಅಂಚೆ

KA / SK / MND / 470 / 2006-2008
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, ®. Melkote. Dist- mandya – 571431
Phone : 08236 – 298754 e-mail : janapada@yahoo.com